# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XV 1    ಜನವರಿ 1997

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ ನಡೆದ ಕಾರ್ಯಕ್ರಮಗಳು | • ರಮಾ ಕೃಷ್ಣ/ಪ್ರತಿಮಾ ರಾವ್ | 2 |
| ಕವಿಗಳ ಕುಸುರೆಳ್ಳು<br>ರಾಮಾಯಣದ ಕೈಕೇಯಿ, ಮಂಥರೆ ಮತ್ತು ಮಹಾಭಾರತದ | • ಸೀತಮ್ಮ ಆರ್. ರಾವ್ | 4 |
| ಸತ್ಯವತಿ | • ರಮಾ ಕೃಷ್ಣ | 5 |
| ಇದು ನಮ್ಮ ಪ್ರಾಚೀನ ಭಾರತ - 2 | • ಎಸ್. ಆನಂದ್ ಶಾಸ್ತ್ರಿ | 7 |
| ದೇವರು - ಒಂದು ಅಭಿಪ್ರಾಯ | • ಗೀತಾ ಚಂದ್ರಶೇಖರ್ | 9 |
| ಕವನಗಳು : | | |
| ಕೊನೆಯ ಹಂಬಲ | • ಅಜ್ಞಾತ | 11 |
| ಮನಸ್ಸು, ಟೀವಿ ಹೆಂಡತಿ ಮತ್ತು ನಾಯಿಮರಿ,<br>ನನ್ನ ಕವಿತೆಗಳು | • ಗೋಪಾಲ ತ್ರಾಸಿ | 11 |
| ನೇಪಿಯೆನ್ಸೀ ರೋಡಿನಲ್ಲಿ..., ಅನಿವಾರ್ಯತೆ,<br>(ಜೀವನ) ಸಾಹಿತ್ಯ ಚರಿತ್ರೆ | • ಸೀತಾರಾಮ್ ಆರ್. ಶೆಟ್ಟಿ | 16 |
| ಗರತಿ - ಜಾನಪದದ ಮೂಲಸೆರೆ | • ಸುಮಾ ದ್ವಾರಕನಾಥ್ | 12 |
| ಸಂಮೋಹಿನಿ ಚಿಕಿತ್ಸೆ - 12 | • ಡಾ| ಉಷಾರಾವ್ | 14 |


The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಅಸೋಸಿಯೇಷನ್ನಿನಲ್ಲಿ ಸಂಗೀತ ಕಾರ್ಯಕ್ರಮಗಳು

## ಸರಳಾಯ ಸಹೋದರಿಯರಿಂದ ಗಾಯನ




ಸರಳಾಯ ಸಹೋದರಿಯರು

ತಾ. 06-12-1996ರ ಸಂಜೆ ಮೈಸೂರು ಅಸೋಸಿಯೇಷನ್ನಿನಲ್ಲಿ ಏರ್ಪಡಿಸಲಾಗಿದ್ದ ಕರ್ನಾಟಕ ಸಂಗೀತ ಕಾರ್ಯಕ್ರಮ ಅಸೋಸಿಯೇಷನ್ನಿನ ಸಂಗೀತ ಪ್ರೇಮಿಗಳಿಗೆ ಒಂದು ಸುಯೋಗವೆಂದೇ ಹೇಳಬೇಕು. ಶ್ರೀಮತಿಯರಾದ ಕವಿತಾ ಮತ್ತು ತ್ರಿವೇಣಿಯವರು ತಮ್ಮ ದೈವದತ್ತವಾದ ಕಂಠ ಮಾಧುರ್ಯದಿಂದಲೂ, ವಿದ್ವತ್ ಪೂರ್ಣವಾದ ಹಾಡುಗಾರಿಕೆಯಿಂದಲೂ, ನಮ್ಮಗಳ ಪಾಲಿಗೆ ಆ ಸಂಜೆಯನ್ನು ಸ್ಮರಣೀಯವಾಗಿ ಮಾಡಿದರು.

ಸಂಗೀತ, ನೃತ್ಯ ಪರಂಪರೆಗೆ ಸೇರಿದ ಕುಟುಂಬದಲ್ಲಿ ಜನಿಸಿದ ಇವರು ಪ್ರಾರಂಭದಲ್ಲಿ ಕೊಳಲು ವಾದಕರಾದ ಶ್ರೀ ನಟರಾಜನ್ ಹಾಗೂ ಶ್ರೀಮತಿ ವಿಜಯ ಲಕ್ಷ್ಮಿಯವರಿಂದ ಸಂಗೀತ ಕಲಿತಿದ್ದಾರೆ. ನಂತರ ಕರ್ನಾಟಕ ಸಂಗೀತ ದಿಗ್ಗಜರಲ್ಲೊಬ್ಬರಾದ ಶೆಮ್ಮಂಗುಡಿ ಶ್ರೀನಿವಾಸ ಅಯ್ಯಂಗಾರ್ ಹಾಗೂ ತಂಜಾವೂರ್ ಶಂಕರ ಐಯ್ಯರ್‌ರವರ ಶಿಷ್ಯೆ ಸೀತಾಲಕ್ಷ್ಮಿ ವೆಂಕಟೇಶನ್‌ರವರಿಂದ ಸಂಗೀತ ಶಿಕ್ಷಣ ಪಡೆದಿದ್ದಾರೆ. ಇದಲ್ಲದೆ ಪ್ರಖ್ಯಾತ ಗಾಯಕರಾದ ಶ್ರೀ ಬಾಲಮುರಳಿ ಕೃಷ್ಣರವರಿಂದಲೂ, ಗಾನ ಕೋಕಿಲೆ ಶ್ರೀಮತಿ ಎಮ್. ಎಸ್. ಸುಬ್ಬಲಕ್ಷ್ಮಿಯವರಿಂದಲೂ, ಹಾಗೂ ವೈಣಿಕ ವಿದ್ವಾನ್ ಶ್ರೀಯುತ ದೊರೆಸ್ವಾಮಿ ಐಯ್ಯಂಗಾರ್‌ರಿಂದಲೂ ಉನ್ನತ ಮಾರ್ಗ ದರ್ಶನ ಪಡೆದವರಾಗಿದ್ದಾರೆ. ತಮ್ಮ ಸಾಧನೆಯಿಂದಲೂ, ಕಂಠ ಮಾಧುರ್ಯದಿಂದಲೂ, ಭಾವಪೂರ್ವಕವಾದ ಹಾಡುಗಾರಿಕೆಯನ್ನು ಕರಗತ ಗೊಳಿಸಿಕೊಂಡಿದ್ದಾರೆ. ಹಿಂದೂಸ್ಥಾನದ ಪ್ರಸಿದ್ಧ ಗಾಯನ ಉತ್ತೇಜಕ ಸಂಸ್ಥೆಗಳು ಹಾಗೂ ಪ್ರಸಿದ್ಧ ನಗರಗಳಲ್ಲಿ ಸುಮಾರು 300ಕ್ಕೂ ಮಿಗಿಲಾಗಿ ಕಾರ್ಯಕ್ರಮಗಳನ್ನು ನೀಡಿ, ವಿದ್ವಜ್ಜನಗಳ ಹಾಗೂ ಸಂಗೀತ ಪ್ರೇಮಿಗಳ ಆದರ ಮತ್ತು ಪ್ರಶಂಸೆಗೆ ಪಾತ್ರರಾಗಿದ್ದಾರೆ. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ವತಿಯಿಂದ ಇಂಗ್ಲೆಂಡಿನ ಮಾಂಚೆಸ್ಟರ್‌ನಲ್ಲೂ ಸಹ ತಮ್ಮ ಕಾರ್ಯಕ್ರಮ ಕೊಟ್ಟಿದ್ದಾರೆ. ಇವರ ತಾಯಿ ನೃತ್ಯ ಕಲಾವಿದೆಯಾಗಿದ್ದು ಅವರಿಂದ ನೃತ್ಯ ಶಿಕ್ಷಣ ಪಡೆದ ಇವರುಗಳು ಅನೇಕ ನೃತ್ಯ ಕಾರ್ಯಕ್ರಮಗಳನ್ನೂ ಸಹ ಕೊಟ್ಟಿರುತ್ತಾರೆ.

ಅಂದು ಇವರ ಹಾಡುಗಾರಿಕೆ ನಾಟರಾಗದ ಗುರುಸ್ತವದಿಂದ ಪ್ರಾರಂಭವಾಯ್ತು. ನಂತರ ಗೌಳರಾಗದಲ್ಲಿ ಪುರಂದರ ದಾಸರ ಶರಣು ಸಿದ್ಧಿ ವಿನಾಯಕ, ಶ್ರೀರಂಜನಿಯಲ್ಲಿ ಬ್ರೋಚೆವಾರೆವರೆ, ಕಾಮ ವರ್ಧಿನಿಯಲ್ಲಿ ಹರ ನೀನೇ ಬಲ್ಲಿದನು, ಹಿಂದೋಳದಲ್ಲಿ ಗೋವರ್ಧನ ಗಿರೀಶ್, ಇತ್ಯಾದಿ ದೇವರ ನಾಮ ಹಾಗೂ ಕೀರ್ತನೆಗಳನ್ನೂ ಆಲಾಪನೆ, ನೆರವಲ್, ಸ್ವರ ಪ್ರಸ್ತಾರದ ಮೂಲಕ, ತಮ್ಮ ರಾಗಗಳ ಮೇಲಿನ ಹಿಡಿತ ಎಷ್ಟೆಂಬುದನ್ನು ತೋರಿಸಿ ಕೊಟ್ಟರು. ಕನಕ ದಾಸರ ಭಜಿಸಿ ಬದುಕಿಲೋ ಮಾನವ ರಾಗ ಮಾಲಿಕೆಯಾಗಿದ್ದು ಸೊಗಸಾಗಿತ್ತು. ಕಲ್ಯಾಣಿ ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ, ``ನಂಬಿ ಕೆಟ್ಟವರಿಲ್ಲವೋ ನಂಬದೇ ಕೆಟ್ಟರೆ ಕೆಡಲಿ'' ಎಂಬ ದೇವರ ನಾಮವನ್ನು, ಸ್ವರ ಪ್ರಸ್ತಾರ ನೆರವಲ್ ಮೂಲಕ ಭಾವಪೂರ್ಣವಾಗಿ ಹಾಡಿದರು. ಇಲ್ಲಿ ಪಕ್ಕ ವಾದ್ಯದವರಾಗಿ ಶ್ರೀಯುತ ಬಾಲಕೃಷ್ಣ ಪಿಟೀಲು ವಾದಕರಾಗಿ ಕೆ. ವಿ. ಜಯ, ಚಂದ್ರರಾವ್ ಮೃದಂಗ ವಾದಕರಾಗಿ ಹಾಗೂ ಕಿರಿಯ ಕಲಾವಿದರಾದ ಗಿರಿಧರ ಉಡುಪ ಘಟಂ ವಾದಕರಾಗಿಯೂ ತಂತಮ್ಮ ಪ್ರತಿಭೆಯನ್ನು ತೋರಿಸುವುದ ಮೂಲಕ ರಂಜಿಸಿದರು. ಅಂದಿನ ಹಾಡುಗಾರಿಕೆ ಮುಖ್ಯವಾಗಿ ದಾಸ ಸಾಹಿತ್ಯಕ್ಕೆ ಪ್ರಾಶಸ್ತ್ಯವಾಗಿದ್ದು, ಶ್ರೀ ಪುರಂದರ ದಾಸರ ಉಗಾಭೋಗ ದಾಸನಾಗುವವನಿಗೆ ವೈಕುಂಠದಲ್ಲಿ ವಾಸವನ್ನೂ, ಅದನ್ನು ಮುಂದುವರಿಸಿ, ದಾಸನ ಮಾಡಿಕೊ ಎನ್ನ ಎಂಬ ನಾದನಾ ಮಕ್ರಿಯೆಯಲ್ಲಿನ ದೇವರ ನಾಮವನ್ನು ಭಾವಪೂರ್ಣವಾಗಿ ಹಾಡಿದರು. ಕೊನೆಯದಾಗಿ ಶ್ರೀಯುತ ಬಾಲಮುರುಳಿಯವರ ರಚನೆ, ಬೃಂದಾವನಿ ರಾಗದ ತಿಲ್ಲಾನ ಕಳಸಪ್ರಾಯವಾಗಿದ್ದಿತ್ತು.

## ಶಂಕರ್‌ರವರ ಸಂಗೀತ



ಶ್ರೀ ಎಸ್. ಶಂಕರ್


ತಾ. 28-12-1996ರಂದು ಮೈಸೂರು ಅಸೋಸಿಯೇಷನ್ನಿನ ಸದಸ್ಯರಿಗೆ ಕರ್ನಾಟಕ ಸಂಗೀತದ ಮತ್ತೊಂದು ಕಾರ್ಯಕ್ರಮವಿತ್ತು. ಬೆಂಗಳೂರು A.G.'s Officeನಲ್ಲಿ ಕೆಲಸ ಮಾಡುವ ಶ್ರೀಯುತ ಶಂಕರ್‌ರವರ ಸಂಗೀತವನ್ನು ಕೇಳುವ ಸುಯೋಗ ಸದಸ್ಯರಿಗೆ ಸಿಕ್ಕಿತು.

ಇವರು ಪ್ರಾರಂಭದಲ್ಲಿ ಇವರ ತಾಯಿ ಶ್ರೀಮತಿ ರಾಜಮ್ಮ ಶಾಸ್ತ್ರಿಯವರಿಂದ ಸಂಗೀತ ಕಲಿತಿದ್ದಾರೆ. ನಂತರ ಶ್ರೀಮತಿ ನಾಗರತ್ನಬಾಯಿಯವರಿಂದಲೂ ಮತ್ತು ಶ್ರೀ ವಲ್ಲಭಂ ಕಲ್ಯಾಣ ಸುಂದರಂ ಇವರಿಂದ ಸಂಗೀತ ಕಲಿತವರಾಗಿದ್ದಾರೆ. ಇವರು ಒಳ್ಳೆಯ ಗಾಯಕರಿದ್ದು ದೇಶ ವಿದೇಶಗಳಲ್ಲಿ ತಮ್ಮ ಕಾರ್ಯಕ್ರಮವನ್ನು ಕೊಟ್ಟಿರುತ್ತಾರೆ. ಪ್ರತಿಷ್ಠಿತ ಸಂಗೀತ ಪೋಷಕ ಸಂಸ್ಥೆಗಳ ಪ್ರಶಸ್ತಿಗಳನ್ನೂ ಗಳಿಸಿದ್ದಾರೆ. ಇವುಗಳಲ್ಲಿ ಪ್ರಮುಖವಾದವು ಆಕಾಶವಾಣಿ, ಗಾಯನ ಸಮಾಜ, ಮ್ಯೂಸಿಕ್ ಅಕಾಡಮಿ, ಮದ್ರಾಸ್, ಇವರ ಕಾರ್ಯಕ್ರಮಗಳು ತಿರುವಯ್ಯಾರ್ ಡ್ಯಾನ್ಸ್ ಫೆಸ್ಟಿವಲ್‌ನಲ್ಲಿ, ಆಕಾಶವಾಣಿ ಸಂಗೀತ ಸಮ್ಮೇಳನ

(ಪುಟ 10ಕ್ಕೆ)

# ಅಸೋಸಿಯೇಷನ್ನಿನಲ್ಲಿ New Year Party

● ಪ್ರತಿಮಾ ರಾವ್



ಸೇರಿದ್ದ ಸದಸ್ಯರಲ್ಲಿ ಕೆಲವರು.

ಎಷ್ಟು ಬೇಗ 1996 ಕಳೆದು ಹೋಯ್ತು! ಎಂದು · ಸುಮಾರು ಜನ ಹೇಳ್ತಿದ್ರು. 1996ರ ಕೊನೆಯ ದಿನಂದು ಅಸೋಸಿಯೇಷನ್‌ನಲ್ಲಿ ಹೊಸ ವರ್ಷವನ್ನು ಸ್ವಾಗತಿಸಲೆಂದು ಸೇರಿದ ಜನರು ವ್ಯಕ್ತಪಡಿಸಿದ ಅನಿಸಿಕೆ ಅದ್ರೂ ಬಹಳಷ್ಟು ಸಿಹಿ, ಕಹಿ ಘಟನೆಗಳು ನಡೆದೇ ಇತ್ತು. ಎಂದಿನಂತೆ ಹೊಸವರ್ಷವನ್ನು ಬರಮಾಡಲು ಹೊಸ ಕನಸುಗಳೊಂದಿಗೆ ಹಾಗು ಹೊಸ ಸಂಭ್ರಮದಿಂದ ನಾವೆಲ್ಲ ಸೇರಿದ್ದೆವು. ಕೆಲವು ಹೊಸ ಸದಸ್ಯರೂ ಇದ್ದರು.

ಗಿರೀಶ್ ಅವರು ಈ ಕಾರ್ಯಕ್ರಮವನ್ನು ಸೊಗಸಾಗಿ ನಿರ್ವಹಿಸಿದ್ದರು.. ಮೊದಲಿಗೆ ಶ್ಯಾಮಲ ಭಕ್ತಿ ಗೀತೆಯನ್ನು ಹಾಡಿದರು. ಚಿಕ್ಕವರು ದೊಡ್ಡವರು ಎಲ್ಲರೂ ಆಡಲೆಂದು ಕಣ್ಣುಮುಚ್ಚಿ ಕೋಲಿನಿಂದ ಮಡಕೆ ಒಡೆಯುವ ಆಟವನ್ನು ಏರ್ಪಡಿಸಿದ್ದರು. ಕೋಲು ಹಿಡಿದು ಎಲ್ಲರೂ ಎಲ್ಲಾ ದಿಕ್ಕಿನಲ್ಲೂ ಹೋಗುತ್ತಿದ್ದರು. ಇದನ್ನು ನೋಡಲು ಬಹಳ ತಮಾಷೆಯಾಗಿತ್ತು. ನಂತರ ರ್ಯಾಫಲ್ ಇತ್ತು. ಪುಟಾಣಿಗಳು ಅದೃಷ್ಟವಂತರ ಚೀಟಿ ತೆಗೆಯುವಾಗ ಎಲ್ಲರ ಮನಸ್ಸಿನಲ್ಲೂ ಈ ಚೀಟಿ ತಮ್ಮದಾಗಿರಲು ಎಂದೆನಿಸುತ್ತಿದ್ದಿರಬಹುದು. ಸುಮಾರು ಬಹುಮಾನಗಳಿದ್ದವು. ಹಾಗಾಗಿ ಬಹಳಷ್ಟು ಜನರಿಗೆ ಬಹುಮಾನಗಳನ್ನು ಗಳಿಸಿದ ತೃಪ್ತಿ ಸಿಕ್ಕಿತ್ತು. ಜೊತೆಗೆ ಹೌಸಿ ಆಟ ಇತ್ತು. ಇಷ್ಟು ನಡೆಯುವ ಹೊತ್ತಿಗೆ ಹೊಸ ವರ್ಷ ಬರುವ ವೇಳೆ ಆಗಿತ್ತು. ಗಿರೀಶರ ಇನ್ನು ಕೆಲವು ಕಾರ್ಯಕ್ರಮಗಳು ಆರಂಭದವಾಗಿತ್ತು. ಎಲ್ಲರೂ ಚೀರಿ ಹೊಸ ವರುಷದ ಅಭಿನಂದನೆಗಳನ್ನು ಒಬ್ಬರಿಗೊಬ್ಬರುಮಾಡ್ಕೊಂಡೆವು. ತಮ್ಮೆಲ್ಲರಿಗೆ ಹೊಸ ವರುಷದ ಶುಭಾಶಯಗಳು.



ಕಣ್ಣು ಮುಚ್ಚಿ, ಕೈಯಲ್ಲಿ ಕೋಲು ಹಿಡಿದು, ಮಡಕೆ ಒಡೆಯುವ ಸಾಹಸ.

## PROGRAMME IN JAN. '97

On 31st January 97,
at 7-30 P.M.
at the association, there will be a Vocal Concert of

**CLASSICAL HINDUSTANI MUSIC**

by

**Kum. Mowna Ramchandra**

from Bangalore.

**All are cordially invited**

**FOR ALL YOUR DOMESTIC AND INTERNATIONAL TRAVEL ARRANGEMENTS**
*CONTACT*
**AUGUST TRAVEL SERVICE**
**Agents For**
INDIAN AIR LINES,
EAST WEST,
MODI LUFT &
JET AIRLINES
**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

# ಕವಿಗಳ ಕುಸುರೆಳ್ಳು

• ಸೀತಮ್ಮ ಆರ್. ರಾವ್

ಅಬ್ಬ! ``ಏನ್ ಮಾತಾಡ್ತಾಳಪ್ಪ ಛಟ ಛಟಾಂತ ಒಳ್ಳೆ ಯೆಳ್ಳು ಸಿಡಿದ ಹಾಗೆ'' ಸಾಧಾರಣ ಯಾರಾದ್ರು ಫುಲ್ ಸ್ಟಾಪ್, ಕಾಮ, ಯಾವುದೂ ಇಲ್ದೆ, ಪಟ ಪಟಾಂತ ಮಾತಾಡಿದ್ರೆ, ಜನ ಸಾಮಾನ್ಯರ ಟೀಕೆ ಇದು. ಹಾಗೆ ಅಬ್ಬಬ್ಬ! ``ಎಳ್ಳು ಹಾಕಿದ್ರೆ ಎಳ್ಳು ಸಿಡಿಯುವಂಥಾ ಬಿಸಿಲು ಮತ್ತು ಎಳ್ಳು ಬೆಲ್ಲ ತಿಂದು ಒಳ್ಳೆ ಮಾತ್ನಾಡು'' ಇದೆಲ್ಲಾ ಜನ ಬಳಕೆಯ ಮಾತುಗಳೇ. ಇದರಿಂದ ಈ ಎಳ್ಳಿನ ಮಹತ್ವ ಎಷ್ಟೆಂದರೆ, ಜನ ಜೀವನದ ನಡೆಯಲ್ಲಿ, ನುಡಿಯಲ್ಲಿ, ತನ್ನದೇ ಆದ ಒಂದು ಸ್ಥಾನವನ್ನು ಗಳಿಸಿಕೊಂಡಿರುವುದಲ್ಲದೆ, ಸಮಾಜದಲ್ಲಿ ತನ್ನ ಪ್ರತಿಷ್ಠೆಯನ್ನು ಉಳಿಸಿ ಕೊಂಡಿದೆ.

ಈ ಎಳ್ಳು ಕವಿಗಳ ಕುಸುರೆಳ್ಳು ಮಾತ್ರವಲ್ಲ, ಜನ ಜೀವನದಲ್ಲಿ ಸುಖ ದುಃಖದ ಸಮ್ಮಿಲನ ಮತ್ತು ಸ್ನೇಹ ಸೌಹಾರ್ದಗಳ ಸಂಕೇತವೂ ಆಗಿದೆ, ಮತ್ತು ರಸಿಕರಿಗೆ ರಸದೌತಣವೂ ಆಗಿದೆ. ಎಲ್ಲರಿಗೂ ಪ್ರಿಯವಾದ, ಎಳ್ಳಿನ ಹಬ್ಬವೇ ಸಂಕ್ರಾಂತಿ - ಸಂಕ್ರಮಣ ಅಥವಾ ಮಕರ ಸಂಕ್ರಾಂತಿ. ಸೂರ್ಯ ಮಕರ ರಾಶಿಯಲ್ಲಿರುವುದರಿಂದ, ಮಕರ ಸಂಕ್ರಾಂತಿ ಅಂತ ಹೇಳ್ತಾರೆ.

ಸಾಧಾರಣ ಹೇಮಂತ ಋತುವಿನಲ್ಲಿ, ಪುಷ್ಯ ಮಾಸದ ಬಹುಳ ಉತ್ತರಾಯಣ ಪುಣ್ಯ ಕಾಲದಲ್ಲಿ, ಈ ಸಂಕ್ರಾಂತಿ ಪುರುಷನ ಅವತಾರವಾಗುತ್ತೆ (ಅಂದ್ರೆ ಜನವರಿ ಹದಿನಾಲ್ಕನೆ ತಾರೀಕಿನಂದು) ಈ ಹಬ್ಬಕ್ಕೆ ಪುರಾಣೇತಿಹಾಸಗಳು ಸಾಕಷ್ಟು ಇದೆ. ಆರು ತಿಂಗಳ ಕಾಲ, ಸ್ವರ್ಗದ ಬಾಗಿಲು ಮುಚ್ಚಿರುತ್ತದೆಂದು ಪುರಾಣದಲ್ಲಿದೆ, ಮತ್ತು ಮಹಾಭಾರತದ ಭೀಷ್ಮರು, ತಾಯಿ ಗಂಗೆಯಿಂದ, ವರ ಪ್ರದಾನವಾಗಿ ಬಂದಿದ್ದ ಇಚ್ಛಾ ಮರಣವನ್ನಪ್ಪಲು, ಮಹಾಭಾರತದ ಯುದ್ಧ ಮುಗಿದು, ಶರ ಶೈಯ್ಯೆಯಲ್ಲಿ ಮಲಗಿದ್ದಾಗ, ಜೀವವನ್ನು, ಉತ್ತರಾಯಣ ಪುಣ್ಯ ಕಾಲ ಬರುವವರೆಗೂ ತಮ್ಮ ಅಧೀನದಲ್ಲಿಟ್ಟುಕೊಂಡು, ಅದು ಬಂದ ಮೇಲೆ, ಇಚ್ಛಾ ಮರಣವನ್ನಪ್ಪಿದರೆಂತನು ಪುರಾಣದಲ್ಲಿ ಹೇಳಿದೆ. ಅದೇನೇ ಇರಲಿ, ನಮ್ಮ ಜನ ಸಾಮಾನ್ಯರು, ಈ ಹಬ್ಬವನ್ನು ಹೇಗೆ ಕೊಂಡಾಡುತ್ತಾರೆ ನೋಡೋಣ.

ಸಾಧಾರಣ ಭಾರತದ ನಮ್ಮ ಹಿಂದೂ ಜನಾಂಗದಲ್ಲಿ, ವರ್ಷವೆಲ್ಲಾ ಒಂದಲ್ಲಾ ಒಂದು ಹಬ್ಬ ಇದ್ದೇ ಇರುತ್ತೆ, ಒಂದೊಂದು ಹಬ್ಬವೂ, ತನ್ನದೇ ಆದ ಸ್ಥಾನವನ್ನು ಉಳಿಸಿ ಕೊಂಡಿದೆ. ಆಯಾಯ ಜನಾಂಗವು, ತಮ್ಮ ರೀತಿ ರಿವಾಜಿಗನುಸಾರವಾಗಿ ಹಬ್ಬಗಳನ್ನು ಆಚರಿಸುತ್ತಾರೆ. ಆದ್ರೆ ಈ ಸಂಕ್ರಾಂತಿಯ ವೈಶಿಷ್ಟ್ಯವೇ ಬೇರೆ. ಹಿರಿಯರು, ಕಿರಿಯರಾದಿಯಾಗಿ ಎಲ್ಲರೂ ಈ ಹಬ್ಬವನ್ನು ಕೊಂಡಾಡ್ತಾರೆ. ಪಟ್ಟಣದಲ್ಲಿ ಇದಕ್ಕೆ ರಂಗು ರಂಗಿನ ಮೆರಗು ಕೊಟ್ಟರೆ, ಹಳ್ಳಿಗಾಡಿನಲ್ಲಿ, ಇದರ ವೈಶಿಷ್ಟ್ಯವೇ ಬೇರೆ. ಪ್ರಕೃತಿಯೇ ಸಿಂಗಾರವಾಗಿ, ಸಂಕ್ರಾಂತಿ ಪುರುಷನನ್ನು ಸ್ವಾಗತಿಸುತ್ತಾಳೆ. ಕವಿಗಳ ಕಣ್ಣಿಗಂತೂ, ರಸದೌತಣ. ಎಲ್ಲೆಲ್ಲಿ ನೋಡಿದರೂ ಬೆಲವು ಹೊನ್ನಿನ ಉಡುಗೆಯನ್ನು ತೊಟ್ಟು, ಬಾಗುತ್ತಾ, ಬಳುಕುತ್ತಾ ನಿಂತ ಭತ್ತದ ತೆನೆ, ರಾಗಿಯ ತೆನೆ ಒಂದು ಕಡೆಯಾದ್ರೆ, ಮತ್ತೊಂದು ಕಡೆ, ಪ್ರಕೃತಿ ಮಾತೆಗೆ, ಚಾಮರ ಸೇವೆ ಸಲ್ಲಿಸುತ್ತಿರುವ, ಕಬ್ಬಿನ ಜಲ್ಲೆಯ ಗದ್ದೆ, ಮತ್ತೊಂದು ಕಡೆ, ರೈತರು ತಮ್ಮ ಕುಯಲಿನ ಹೊಸ ಬೆಳೆಯನ್ನು, ತಮ್ಮ ಕಣಗಳಲ್ಲಿ ರಾಶಿ ಹಾಕಿರುತ್ತಾರೆ. ಹೊನ್ನಿನ ಗುಡ್ಡವೇ ಮೈ ತಳೆದಂತೆ ನಿಂತ ಭತ್ತದ ರಾಶಿ ಒಂದು ಕಡೆ, ಮತ್ತೊಂದು ಕಡೆ ರಾಗಿಯ ರಾಶಿ. ಹೀಗೆ, ತಮಗೆ ಬಂದ ಬೆಳೆಯನ್ನೆಲ್ಲಾ, ರಾಶಿ ಹಾಕಿ, ತಮ್ಮ ಶ್ರಮದ ಫಲವನ್ನು ಕಣ್ತುಂಬ ನೋಡಿ, ಆ ರಾಶಿಗಳನ್ನು ಭಕ್ತಿಯಿಂದ ಪೂಜಿಸಿ, ಹೊಸ ಬೆಳೆಯ ಪಾಯಸ ಪರಮಾನ್ನ ಉಂಡು, ಹಾಡಿ ಪಾಡಿ ಕುಣಿದು ಆನಂದಿಸುತ್ತಾರೆ.

ಹಳ್ಳಿಗಾಡಿನಲ್ಲಿ, ಈ ಹಬ್ಬದ ಇನ್ನೊಂದು ಆಕರ್ಷಣೀಯವಾದ್ದೆಂದರೆ, ಹಸುಗಳು ಮತ್ತು ಎತ್ತುಗಳಿಗೆ ಸ್ನಾನ ಮಾಡಿಸಿ, ಅವುಗಳ ಕೊಂಬುಗಳಿಗೆ ಬಣ್ಣ ಬಣ್ಣದ ಅಲಂಕಾರ ಮಾಡಿ ಹೂವಿನ ಮಾಲೆ ಹಾಕಿ, ಕಾಲಿಗೆ ಗೆಜ್ಜೆ, ಕತ್ತಿಗೆ ಘಂಟೆ ಕಟ್ಟಿ, ಅರಿಶಿನ ಕುಂಕುಮದೊಂದಿಗೆ ಭಕ್ತಿಯಿಂದ ಪೂಜೆ ಮಾಡಿ, ಮೆರವಣಿಗೆ ಮಾಡುತ್ತಾರೆ. ಆಹಾ! ಆ ಘಂಟೆಯ ಢಣ ಢಣ ಶಬ್ದ, ಕಾಲಿನ ಗೆಜ್ಜೆಯ ಇನಿದಾದ ಝಣತ್ಕಾರಕ್ಕೆ, ಬಾಗುತ್ತಾ, ಬಳುಕುತ್ತಾ ಮಂದ ಗತಿಯಿಂದ ನಡೆಯುವ ಹಸುಗಳು ಮತ್ತು ಎತ್ತುಗಳು, ಸುತ್ತಲೂ ಪ್ರಕೃತಿ ಸೌಂದರ್ಯ. ಆಹಾ! ಸ್ವರ್ಗದ ಬಾಗಿಲು ತೆಗೆಯೊದು ಇರ್ಲಿ, ಸ್ವರ್ಗವೇ ಇಳೆಗೆ ಇಳಿದು ಬಂದಂತೆ ಭಾಸವಾಗುತ್ತೆ.

ಎಲ್ಲರ ಮನೆಗಳಲ್ಲಿಯೂ ಎಳ್ಳಿನ ಕಂಪು. ಎಳ್ಳಿಗೆ ವಿಧಾ ವಿಚಿತ್ರದ ಸಿಂಗಾರ. ಕೊಬ್ಬರಿ, ಬೆಲ್ಲ, ಹುರಿಗಡಲೆ, ಕಡಲೇಕಾಯಿ ಬೀಜ ಇವುಗಳ ತೊಡುಗೆಯ ಮೆರಗು ಕೊಟ್ಟಿರುತ್ತಾರೆ. ದೈವ ಸ್ವರೂಪವಾದ ಗೋಮಾತೆಗೆ ಪೂಜೆ ಮಾಡಿ, ಆರತಿ ಎತ್ತಿ, ಗೋಗ್ರಾಸಾಂತ ಸುಗ್ರಾಸ ಭೋಜನದೊಂದಿಗೆ ಎಳ್ಳು ಬೆಲ್ಲವನ್ನು ತಿನ್ನಿಸುತ್ತಾರೆ. ವೈದಿಕರು ಪಿತೃಗಳಿಗೆ, ಎಳ್ಳಿನ ತರ್ಪಣದೊಂದಿಗೆ ತಮ್ಮ ಶ್ರದ್ಧಾಂಜಲಿಯನ್ನರ್ಪಿಸುತ್ತಾರೆ. ಬ್ರಾಹ್ಮಣರಿಗೆ ಹೊಸ ಬೆಳೆ, ಎಳ್ಳು ದಾನ ಕೊಡುತ್ತಾರೆ. ಚಿಕ್ಕ ಹೆಣ್ಣು ಮಕ್ಕಳು, ಕೈಲಿ ತಮ್ಮ ಪ್ರೀತಿಯ ಸಂಗಾತಿ ಬೊಂಬೆಯನ್ನು ಎತ್ತಿ ಕೊಂಡು, ಮನೆ ಮನೆಗೆ ಹೋಗಿ, ಎಳ್ಳು ಬೀರುವ ಸಂಭ್ರಮ, ನೋಡಿದವರ ಕಣ್ಣಿಗೆ ಮರೆಯಲಾಗದಂಥ ನೋಟ, ಮತ್ತು ಚಿಕ್ಕ ಮಕ್ಕಳಿಗೆ ಪೀಡೆ ಪರಿಹಾರಾಂತ, ಎಳ್ಳು, ಎಲಚಿ ಫಲವನ್ನು ನೀವಾಳಿಸಿ ಆರತಿ ಮಾಡುತ್ತಾರೆ.

ಕೆಲವು ಜನಾಂಗದಲ್ಲಿ, ಈ ನಾಗರೀಕ ಯುಗದಲ್ಲೂ ಕೆಲವು ಹೆಣ್ಣು ಮಕ್ಕಳು, ಎಳ್ಳಿನ ಕುಸುರಿಯಿಂದ ನಾನಾ ತರಹ ಆಭರಣಗಳನ್ನು ಮಾಡಿ, ತಮ್ಮ ಪ್ರೀತಿಯ ಬಂಧುಗಳಿಗೆ, ಸ್ನೇಹಿತರುಗಳಿಗೆ, ಎಳ್ಳು ಬೆಲ್ಲದೊಂದಿಗೆ ಉಡುಗೆರೆಯಾಗಿ ಕೊಡುತ್ತಾರೆ. ಮಹಾರಾಷ್ಟ್ರದಲ್ಲಿ, ಸಂಕ್ರಾಂತಿಯನ್ನು ರಥ ಸಪ್ತಮಿಯವರೆಗೂ ಆಚರಿಸುತ್ತಾರೆ ಮತ್ತು ಕುಸುರಿ ಕಾಳಿನಿಂದ ತಯಾರಿಸಿದ, ಕುಶಲ ಕಲೆಗಳನ್ನು ಪ್ರದರ್ಶನಕ್ಕೆ ಇಟ್ಟು, ನೋಡುವವರ ಮನವನ್ನು ತಣಿಸಿ ತಾವೂ ನಲಿಯುತ್ತಾರೆ. ಅವರಲ್ಲಿ ಇನ್ನೊಂದು ಆಕರ್ಷಣೀಯವಾದ್ದೆಂದರೆ, ಹೊಸದಾಗಿ ಮದುವೆಯಾಗಿ ಮನೆ ತುಂಬಿದ ಸೊಸೆಗೆ, ಮೊದಲನೆಯ ವರ್ಷದ ಸಂಕ್ರಾಂತಿಯಾಗಿದ್ದರೆ, ಅವಳಿಗೆ ಅತ್ತೆಯ ಮನೆಯಲ್ಲಿ ವಿಶೇಷ ಸಂಭ್ರಮ. ತಾಯಿ ಮನೆಯಿಂದ, ಸಂಕ್ರಾಂತಿಯ ನಿಮಿತ್ತ ಕೊಟ್ಟ ಉಡುಗೆರೆಯನ್ನು ಉಡಿಸಿ ಕುಸುರಿ ಕಾಳಿನಿಂದ ತಯಾರಿಸಿದ ಕಿರೀಟವನ್ನು ಅವಳ ತಲೆಗೆ ಇಟ್ಟು, ಕುಸುರಿ ಕಾಳಿನಿಂದಲೇ ತಯಾರಿಸಿದ ಆಭರಣಗಳನ್ನು ತೊಡಿಸಿ, ಬಂಧು-ಮಿತ್ರರು ಮತ್ತು ಸುಮಂಗಲಿಯರನ್ನು ಆಮಂತ್ರಿಸಿ, ಸೊಸೆಗೆ ಆರತಿ ಮಾಡಿ, ಬಂದ ಸುಮಂಗಲಿಯರಿಗೆಲ್ಲಾ, ಅರಿಶಿನ ಕುಂಕುಮದೊಂದಿಗೆ ಉಡುಗೆರೆಯ ಜೊತೆ, ಎಳ್ಳಿನಿಂದ ತಯಾರಿಸಿದ ಲಾಡು ಮುಂತಾದನ್ನು ಉಡಿ ತುಂಬಿ ತಿಳ್ ಗುಳ್ ಘ್ಯಾ, ಗೋಡ್ ಗೋಡ್ ಬೋಲಾ ಅಂತಾರೆ.

ಇನ್ನೊಂದೇನೆಂದ್ರೆ, ಆರೋಗ್ಯದ ದೃಷ್ಟಿಯಿಂದಲೂ ಈ ಎಳ್ಳಿಗೆ ಮಹತ್ವವಿದೆ. ಏನೆಂದ್ರೆ, ಮಾಗಿ ಛಳಿಗೆ ಮೈನಲ್ಲಿ ಜಿಡ್ಡಿನ ಅಂಶ ಕಡಿಮೆಯಾಗುತ್ತೆ, ಮೈ ಬಿರಿಯೋದು, ಒಣಗೋದು ಈ ಥರ ಎಲ್ಲಾ ಆಗುತ್ತೆ. ಅದರಿಂದ, ಈ ಎಳ್ಳಿನಲ್ಲಿ ಮತ್ತು ಕೊಬ್ಬರಿ,

(ಪುಟ 10ಕ್ಕೆ)

# ರಾಮಾಯಣದ ಕೈಕೇಯಿ, ಮಂಥರೆ ಮತ್ತು ಮಹಾಭಾರತದ ಸತ್ಯವತಿ

● ರಮಾ ಕೃಷ್ಣ

ರಾಮಾಯಣದ ಕೈಕೇಯಿ, ಹಾಗೂ ಮಂಥರೆ ಅತ್ಯಂತ ನಿಂದೆಗೆ ಒಳಗಾದ ಪಾತ್ರಗಳು. ನಿಶ್ಚಯವಾಗಿ ಈ ಇಬ್ಬರು ನಿಂದೆ ನಿಕೃಷ್ಟತೆಗೆ ಅರ್ಹರೇ? ಎಂದು ಆಲೋಚಿಸಿದಾಗ, ಇವರಿಬ್ಬರೂ ನಮಗೆ ನಿಷ್ಕಳಂಕರಾಗಿ ಕಾಣಿಸುವುದರಲ್ಲಿ ಸಂಶಯವಿಲ್ಲ.

ಹಾಗೆಯೇ ಮಹಾಭಾರತದ ಸತ್ಯವತಿ ಮತ್ತು ಕೈಕೇಯಿಯಲ್ಲಿ ಸಾಮ್ಯತೆ ನಮಗೆ ಕಂಡು ಬರುತ್ತದೆ. ಸತ್ಯವತಿ ಕೈಕೇಯಿಯಂತೆ ನಿಂದೆ ನಿಕೃಷ್ಟತೆಯನ್ನೇನೂ ಅನುಭವಿಸಲಿಲ್ಲ. ಕುರು ವಂಶದ ಮಹಾರಾಣಿಯಾದ ಆಕೆ ಶಂತನು ಚಕ್ರವರ್ತಿಯ ನಿಧನಾ ನಂತರ ತನ್ನ ಮಕ್ಕಳನ್ನು ಕಳೆದು ಕೊಂಡಳು. ಧೀಮಂತನಾದ ಭೀಷ್ಮ ತನ್ನಿಂದಲೇ ಸಿಂಹಾಸನದಿಂದಲೂ ಹಾಗೂ ಸಂಸಾರದಿಂದಲೂ ವಂಚಿತನಾದನೆಂಬ ಮಾತು ಆಕೆಗೆ ತನ್ನನ್ನು ತಾನೇ ನಿಂದಿಸಿ ಕೊಳ್ಳುವಂತಾಗಲಿಲ್ಲವೇ?

ಕೈಕೇಯಿ ಮತ್ತು ಸತ್ಯವತಿಯರಿಬ್ಬರೂ ತನ್ನ ಹದಿಹರೆಯಲ್ಲಿ ಭಾವೀ ಜೀವನದ ಬಗ್ಗೆ ಹೊಂಗನಸನ್ನು ಹೆಣೆಯುತ್ತಿದ್ದಾಗ, ತುಂಬು ಹರೆಯದ ನವ ಯುವಕರನ್ನು ತಮ್ಮ ನಿಯರಾಗುವರೆಂದು ಕನಸು ಕಾಣುತ್ತಿದ್ದಾಗ ಇವರ ಪಾಲಿಗೆ ಒದಗಿ ಬಂದ ಗಂಡಂದಿರು ಮುಪ್ಪಡರಿ ತಲೆ ನೆರೆತು ನಾನಾ ರಾಣಿಯರು ಮತ್ತು ಉಪ ಪತ್ನಿಯರೊಂದಿಗೆ ತಮ್ಮ ಪ್ರಾಯವನ್ನು ಕಳೆದ ವಂಠೋಪ್ಪದ್ದರು, ಕನ್ಯಾರ್ಥಿಗಳಾಗಿ ಬಂದಾಗ ಇವರ ಅಂತರಂಗ ನೊಂದಿಲ್ಲವೇ? ಇವರ ತಂದೆಯರು ಈವಯೋವೃದ್ಧರನ್ನು ಅಳಿಯಂದಿರಾಗಿ ಸುಮ್ಮನೇ ಸ್ವೀಕರಿಸಿದರೆ? (ನಿಜ ಕ್ಷತ್ರಿಯರಿಗೆ ವಯಸ್ಸನ್ನು ನೋಡದೇ ತೋಳ್ಬಲವನ್ನೇ ನೋಡುತ್ತಿದ್ದರು). ತಮ್ಮ ಮುದ್ದು ಕುವರಿಯವರ ಮುಂದಿನ ಜೀವನ ಹೇಗಿದ್ದೀತೆಂಬ ಅಂದಾಜು ಆ ತಂದೆಯರಿಗೆ ಇರಲಿಲ್ಲವೇ? ಒಂದರಲ್ಲಾದ ಕೊರತೆಯನ್ನು ಮತ್ತೊಂದರಲ್ಲಿ ತುಂಬ ಬಯಸಿದರಲ್ಲವೇ? ಈ ತಂದೆಯರು?

ದಶರಥ ಮಹಾರಾಜ ತನ್ನ ವೃದ್ಧಾಪ್ಯದಲ್ಲಿ ಕೈಕೇಯಿಯನ್ನು ಬಯಸಿ ಕನ್ಯಾರ್ಥಿಯಾಗಿ ಕೈಕೆಯ ರಾಜನಾದ ಅಶ್ವಪತಿಯಲ್ಲಿಗೆ ಹೋದಾಗ, ಅಶ್ವಪತಿ ಹಾಗೂ ಅವನ ಮಗ ಯುಧಾಜಿತುವಿಗೆ ಭಾವೀ ರಾಜ್ಯ ಶುಲ್ಕವನ್ನು ಕೊಡುವುದಾಗಿ ವಾಗ್ದಾನ ಮಾಡುತ್ತಾನೆ (ವಾಲ್ಮೀಕಿ ರಾಮಾಯಣ) ಅಂದರೆ ಕೈಕೇಗೆ ಹುಟ್ಟುವ ಮಗನಿಗೇ ರಾಜ್ಯಾಭಿಷೇಕ ಮಾಡುವೆನೆಂದು ಅರ್ಥ. ಇದೇ ದಶರಥ ಕೊಡ ಬೇಕಾದ ಕನ್ಯಾಶುಲ್ಕ ಇದಷ್ಟೇ ಅಲ್ಲದೆ, ದೇವಾಸುರ ಯುದ್ಧದಲ್ಲಿ, ಕೈಕೆ ಗಂಡನೊಂದಿಗೆ ರಣರಂಗದಲ್ಲಿ ಹಾಜರಿದ್ದು ದಶರಥನನ್ನು ಕಾಪಾಡಿದ ದಿಟ್ಟೆ, ಅವಳಿಗೆ ಮೆಚ್ಚಿ ಎರಡು ವರವನ್ನೂ ಪಾಲಿಸಿದ್ದದ್ದೂ ನಿಜ. ಕೈಕೆ ದಶರಥನ ಮನ ಮೆಚ್ಚಿದ ರಾಣಿಯೂ ಹೌದು. ಇಷ್ಟೆಲ್ಲಾ ಇದ್ದೂ ಸಹ ಕೈಕೆಯ ಮಗನಿಗೆ ತಾನಾಗಿ ರಾಜ್ಯಾಭಿಷೇಕವನ್ನು ದಶರಥ ಮಾಡಬೇಕಿತ್ತು. ಇಲ್ಲಾ ರಾಮನಿಗೆ ಯುವ ರಾಜ್ಯಾಭಿಷೇಕ ಮಾಡುವ ಘೋಷಣೆ ಮಾಡುವ ಮೊದಲು ಪುರ ಪ್ರಮುಖರು, ಗುರು ಜನಗಳು, ಅಧೀನ ರಾಜರೊಂದಿಗೆ ತಾನು ಅಶ್ವಪತಿಗೆ ಕೊಟ್ಟಿದ್ದ ವಾಗ್ದಾನವನ್ನು ಪ್ರಸ್ತಾಪಿಸಿಯಾದರೂ ಪ್ರಸ್ತಾಪಿಸ ಬೇಕಿತ್ತು. ಹಿರಿಯ ಹೆಂಡತಿಗೆ ಜನಿಸಿದ ಹಿರಿಯ ಮಗನಿಗೆ ರಾಜ್ಯವೆಂದು ಪರಂಪರಾನುಗತವಾಗಿ ಬಂದಿದ್ದ ಪದ್ಧತಿಯನ್ನು ಮರೆತು, ಅಶ್ವಪತಿಗೆ ವಾಗ್ದಾನ ಮಾಡಿದ್ದು ದಶರಥನ ಅವಿವೇಕವೆನ್ನದೆ ವಿಧಿ ಇಲ್ಲ. ರಾಜ ನಿರಂಕುಶ ಪ್ರಭು ಎನಿಸಿದ್ದರೂ ಪ್ರಜೆಗಳ ಸಮ್ಮತಿ ಸಂತೋಷವನ್ನು ಕಡೆಗಣಿಸುವುದು ಸಾಧ್ಯವಿರಲಿಲ್ಲ. ಇಲ್ಲಿ ದಶರಥ ಅಶ್ವಪತಿ (ಕೈಕೆಯ ತಂದೆ)ಗೂ ಕೊಟ್ಟಿದ್ದ ವಾಗ್ದಾನವನ್ನು ಮರೆತಿದ್ದನೋ ಇಲ್ಲಾ ಮರೆತಂತೆ ನಟಿಸಿದನೋ! ಇದು ಯೋಚಿಸಬೇಕಾದ ವಿಷಯ.

ದಶರಥ (ವಾಲ್ಮೀಕಿ ರಾಮಾಯಣ 3ನೇ ಸರ್ಗ) ತನ್ನ ಆಸ್ಥಾನದಲ್ಲಿ, ಪುರ ಪ್ರಮುಖರೂ, ಗುರು ಜನಗಳೂ, ಮಾಂಡಲೀಕರುಗಳ ಮುಂದೆ ತನಗೆ ದುಃಸ್ವಪ್ನಗಳೂ, ದುಃಶಕುನಗಳೂ, ಉಂಟಾಗುತ್ತಿವೆಯೆಂದೂ ರಾಮನಿಗೆ ಯುವ ರಾಜ್ಯಾಭಿಷೇಕವನ್ನು ಜಾಗ್ರತೆ ಮಾಡ ಬೇಕೆಂದು ಪ್ರಸ್ತಾಪಿಸುತ್ತಾನೆ. ಆಸ್ಥಾನದಲ್ಲಿದ್ದ ಪುರ ಪ್ರಮುಖರೂ, ಗುರು ಜನಗಳೂ, ಮಾಂಡಲೀಕರೂ ಒಕ್ಕೊರಲಿನಿಂದ ರಾಮನ ಗುಣಗಾನ ಮಾಡಿ ರಾಮನನ್ನು ತಮ್ಮ ಭಾವೀ ರಾಜನನ್ನಾಗಿಸಿ ಕೊಳ್ಳಲು ಉತ್ಸುಕತೆಯನ್ನು ತೋರಿಸುತ್ತಾರೆ. ದಶರಥ ಇಲ್ಲಿ ರಾಮನನ್ನು ಅವನ ಗುಣ, ನಡೆ, ನುಡಿಯಿಂದ ಜನ ಸನ್ಮಾನಿಸುತ್ತಾರೆ ಎಂಬುದನ್ನು ಗಟ್ಟಿ ಮಾಡಿ ಕೊಳ್ಳುತ್ತಾನೆ (ಅಂದರೆ ಅವನನ್ನು ಪ್ರಜೆಗಳ ಮೇಲೆ ಹೇರ ಬೇಕಿಲ್ಲ) ರಾಮ ಜನಾನುರಾಗಿ, ಪುರುಷೋತ್ತಮ ಅವನನ್ನು ಯುವ ರಾಜನನ್ನಾಗಿ ಮಾಡುವುದಕ್ಕೆ ರಾಜಾಜ್ಞೆಯ ಅವಶ್ಯಕತೆ ಇಲ್ಲ ಎಂದು ಅವನಿಗೆ ಸಂತೋಷವಾಗುತ್ತದೆ. ಈ ಸನ್ನಿವೇಶದಲ್ಲಿ ಭರತ ಮತ್ತು ಶತ್ರುಘ್ನರು ತಾತನ ಮನೆಯಾದ ಕೈಕೆಯ ರಾಜ್ಯದ ರಾಜಧಾನಿ ರಾಜಗೃಹದಲ್ಲಿರುತ್ತಾರೆ. ದಶರಥ ಈ ಶುಭ ಸಮಾರಂಭಕ್ಕೆ ಭರತನನ್ನಾಗಲೀ ಅವರ ತಾತ ಅಶ್ವಪತಿಯನ್ನಾಗಲೀ ಕರೆಸಿ ಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ರಾಮನ ಯುವ ರಾಜ್ಯಾಭಿಷೇಕ ಸಿದ್ಧತೆಗೆ ಆಜ್ಞೆ ಮಾಡುತ್ತಾನೆ.

4ನೇ ಸರ್ಗ (ವಾಲ್ಮೀಕಿ ರಾಮಾಯಣ) ಮಾರನೇ ದಿನವೇ ಪುಷ್ಯ ನಕ್ಷತ್ರವಿರುವುದರಿಂದ ನಾಳೆಯೇ ಜಾಗ್ರತೆಯಾಗಿ ರಾಜ್ಯಾಭಿಷೇಕವಾಗಬೇಕೆಂದು ಮಂತ್ರಿಗಳಿಗೆ ತ್ವರೆ ಮಾಡುತ್ತಾನೆ. (ಇಲ್ಲಿ ಮುಹೂರ್ತವನ್ನು [ದಿನವನ್ನು] ರಾಜ ಗುರುವಾದ ವಸಿಷ್ಠರು ಗೊತ್ತು ಪಡಿಸುವುದಿಲ್ಲ, ದಶರಥನೇ ಗೊತ್ತು ಪಡಿಸುತ್ತಾನೆ) ರಾಮನನ್ನು ಕರೆಸಿ ಕೊಂಡು ಹೇಳುತ್ತಾನೆ. ``ಎಲೈ ಪುತ್ರನೇ ಪ್ರಜೆಗಳೆಲ್ಲಾ ನಿನ್ನನ್ನು ಯುವ ರಾಜನನ್ನಾಗಿ ಪಡೆಯಲು ಉತ್ಸುಕರಾಗಿದ್ದಾರೆ. ನನಗೆ ಬಿದ್ದ ದುಃಸ್ವಪ್ನದಿಂದ ಏನೋ ಅನಿಷ್ಟ ಸಂಭವಿಸ ಬಹುದಾಗಿದೆ. ನನ್ನ ಮರಣವೂ ಸಂಭವಿಸ ಬಹುದಾಗಿದೆ. ರಾಘವ ನನ್ನ ಮನಸ್ಸು ಮೋಹಗೊಂಡು ಬದಲಾಯಿಸುವುದಕ್ಕೆ ಮುಂಚೆ ನೀನು ಯುವ ರಾಜ್ಯಾಭಿಷೇಕ ಮಾಡಿಸಿಕೋ. ಪ್ರಾಣಿಗಳಿಗೆ ಬುದ್ಧಿಯು ಅಸ್ಥಿರವಾದುದು. ಪುನರ್ವಸು ನಕ್ಷತ್ರಕ್ಕೆ ಚಂದ್ರನು ಬಂದಿರುವನು. ಪುಷ್ಯ ನಕ್ಷತ್ರ ಯೋಗವು ನಾಳೆಯೇ ಒದಗಬಹುದು. ನೀನು ನಿನ್ನ ಪತ್ನಿಯೊಡಗೂಡಿ ಇಂದಿನಿಂದಲೇ ನಿಯಮವಾಗಿರು. ಇಂತಹ ಕಾರ್ಯಕ್ಕೆ ವಿಘ್ನ ಬಹಳ. ಭರತನು ದೇಶದಿಂದ ಹೊರಗಿರುವ ಈ ಸಮಯವೇ ನಿನ್ನ ಅಭಿಷೇಕಕ್ಕೆ ತಕ್ಕ ಕಾಲವೆಂದೂ ನಾನು ಅಭಿಪ್ರಾಯ ಪಡುತ್ತೇನೆ." (ಇದೇಕೆ ಹೇಳಿದ? ಭರತನಿದ್ದಲ್ಲಿ ರಾಜ್ಯಾಭಿಷೇಕಕ್ಕೆ ಅಡ್ಡಿಯೆಂದಲ್ಲವೇ(?) ನಿನ್ನ ತಮ್ಮನಾದ ಭರತನು ಸದ್ವೃತ್ತಿಯಲ್ಲಿಯೇ ಇದ್ದು ಕೊಂಡು, ಅಣ್ಣನನ್ನು ಅನುಸರಿಸಿಕೊಂಡು, ಧರ್ಮಾತ್ಮನೂ, ದಯಾವಂತನೂ, ಜಿತೇಂದ್ರಿಯನೂ ಆಗಿರುವನು. ಆದಾಗ್ಯೂ ಮನುಷ್ಯನ ಮನಸ್ಸನ್ನು ಹೇಳಲಾಗದು. ಎಲೈ ರಾಘವಾ ಧರ್ಮದಲ್ಲಿಯೇ ಸದಾ ಕಾಲವೂ ನಿರತರಾದ ಸತ್ಪುರುಷರ ಮನಸ್ಸು ಅವರು ಮಾಡತಕ್ಕ ಕಾರ್ಯಗಳಿಂದ ಹೊರ ಬೀಳುವುದು! ಇಷ್ಟು ಹೇಳಿ ರಾಮನನ್ನು ಕಳಿಸುತ್ತಾನೆ. ರಾಮ

ಮೌನಿಯಾಗಿ ತಂದೆ ಹೇಳಿದ್ದನ್ನೆಲ್ಲಾ ಕೇಳಿಕೊಂಡು ತನ್ನ ಭವನಕ್ಕೆ ಹೋಗುತ್ತಾನೆ.

ಇಲ್ಲಿ ಬರುವ ಮತ್ತೊಂದು ಪಾತ್ರ ``ಮಂಥರೆ". ಮಂಥರೆ ಕೈಕೆಯಿಯ ಜ್ಞಾತಿಗಳಲ್ಲಿದ್ದು, ಕೈಕೆಯ ಬಳಿಯಲ್ಲಿದ್ದವಳು, ಕೈಕೆಯಲ್ಲಿ ಬಹಳ ಪ್ರೀತಿ ಹಾಗೂ ಸಲಿಗೆಯುಳ್ಳವಳು. ಇವಳು ಕುರೂಪಿ, ಜುಬ್ಬೆ, ಇವಳೆಷ್ಟು ಕುರೂಪಿಯೋ ಇವಳ ಮನಸ್ಸೂ ಅಷ್ಟೇ ಕುರೂಪವಾಗಿತ್ತು, ಇವಳು ಕೈಕೆಯ ಹಿತಚಿಂತಕಳು. ಅರಮನೆ ರಾಣಿವಾಸಗಳು. ಮೇಲ್ನೋಟಕ್ಕೆ ನೋಡುವವರಿಗೆ ಚಂದವಾಗಿರುತ್ತಿತ್ತು ವಿನಹ ನಿಶ್ಚಯವಾಗಿಯೂ ಅಲ್ಲ. ಇಲ್ಲಿಯೂ ಅಧಿಕಾರಕ್ಕಾಗಿ ಕಿತ್ತಾಟ ಸ್ಪರ್ಧೆಗಳು ಅತಿ ಸಾಮಾನ್ಯವಾಗಿರುತ್ತಿತ್ತು. ರಾಜ ಮಾತೆಗಿರುತ್ತಿದ್ದ ಅಧಿಕಾರ, ಹಾಗೂ ದರ್ಜೆಗಳು ಮಿಕ್ಕವರಿಗಿರುತ್ತಿರಲಿಲ್ಲ. ಸಹಜವಾಗೀ ರಾಜಮಾತೆಯಾಗಲು ಸ್ಪರ್ಧೆ ನಡೆದಿರುತ್ತಿತ್ತು. ಈ ಸ್ಪರ್ಧೆ, ಪಿತೂರಿ ಇವುಗಳಲ್ಲಿ ರಾಣಿಯರು, ರಾಣಿಯರ ಹಿತಚಿಂತಕರು, ಅವರ ದಾಸದಾಸಿಯರು ಎಲ್ಲರೂ ಭಾಗಿಗಳಾಗಿ ನಡೆಸಿರುವ ಪಿತೂರಿಗಳು, ಮೋಸ, ಕೊಲೆ ಇವು ಇತಿಹಾಸದಲ್ಲಿ ನಮಗೆ ಸಾಕಷ್ಟು ದೊರೆಯುತ್ತದೆ. ರಾಜನಿಗಾದರೋ ಅಸಂಖ್ಯ ರಾಣಿಯರಿರುತ್ತಿದ್ದರು. ಒಬ್ಬೊಬ್ಬಳನ್ನು ಒಂದೊಂದು ಕಾರಣಕ್ಕೆ ಮದುವೆಯಾಗಿರುತ್ತಿದ್ದ ರಾಜ. ನಿಶ್ಚಯವಾಗಿ ಅವನು ಮನಮೆಚ್ಚಿ ಮದುವೆ ಮಾಡುವಳೊಬ್ಬಳಾದರೆ, ರಾಜ ಕಾರಣಕ್ಕೋ, ಅನೇಕ ಒತ್ತಡಕ್ಕೋ ಅವನ ರಾಣೀವಾಸ ವಿವಿಧ ರಾಜಕುಮಾರಿಯರಿಂದ ತುಂಬಿರುತ್ತಿತ್ತು. ಅನೇಕ ವೇಳೆ ರಾಜ ಅವನ ಹೆಂಡಿರ ಹೆಸರನ್ನೂ ಮರೆತಿರುತ್ತಿದ್ದದೂ ಉಂಟು. ಪ್ರತಿರಾಣಿಗೂ ಒಂದೊಂದು ಮಹಲು, ಅವರದೇ ಆದ ದಾಸ, ದಾಸಿಯರು (ಇವರು ಬಹುತೇಕ ಅವರವರ ತೌರಿನವರಾಗಿರುತ್ತಿದ್ದರು) ಮತ್ತು ಪರಿವಾರವನ್ನೊಳಗೊಂಡಿರುತ್ತಿತ್ತು. ಈ ಪರಿವಾರದವರು ಯಾವ ಕಾರಣಕ್ಕೂ ತಮ್ಮ ತಮ್ಮ ರಾಣಿಯರಿಗೆ ಕೇಡಾಗದಂತೆ ನೋಡಿ ಕೊಳ್ಳುತ್ತಿದ್ದರು. ಹಾಗೂ ಅವರ ಗೌರವ ಪ್ರತಿಷ್ಠೆಗಳನ್ನು ತೋರಿಸುವುದರಲ್ಲೂ ಸಹಕರಿಸುತ್ತಿದ್ದರು. ಇಂಥವರಲ್ಲಿ ಮಂಥರೆಯೂ ಒಬ್ಬಳು. ಇವಳಿಗೆ ಕೈಕೆಯಿಯಲ್ಲಿ ಮಮತೆ ಹಾಗೂ ಸಲಿಗೆ ಎರಡೂ ಇತ್ತು. ದಶರಥ ಮಹಾರಾಜ, ಭರತ, ಶತೃಘ್ನರು ತಾತನ ಮನೆಗೆ ಹೋಗಿದ್ದಾಗಲೇ ಆತುರ ಆತುರವಾಗಿ ರಾಮನ ಯುವ ರಾಜ್ಯಾಭಿಷೇಕದ ಏರ್ಪಾಡು ಮಾಡುತ್ತಿರುವುದು ಮಂಥರೆಯ ಮನದಲ್ಲಿ ಮಂಥನವನ್ನೇ ತಂದಿತೆಂದೇ ಹೇಳಬೇಕು. ಅವಳು ಕೈಕೆಯ ಮನಸ್ಸನ್ನು ಸಂಪೂರ್ಣ ಮಾರ್ಪಡಿಸುವಲ್ಲಿ ಸಮರ್ಥಳಾದಳು. ಕೈಕೆಗೆ ಸಕಾಲದಲ್ಲಿ ದಶರಥ ಮಹಾರಾಜ ಹಿಂದೆ ಕೊಟ್ಟಿದ್ದ ವರಗಳನ್ನೂ ಜ್ಞಾಪಿಸಿದ್ದಲ್ಲದೇ ರಾಜಮಾತೆಯಾಗಿ ಮೆರೆಯುವ ಕನಸನ್ನು ಅವಳ ಮನದಲ್ಲಿ ತುಂಬಿದಳು. ಒಂದು ವೇಳೆ ಕೌಸಲ್ಯೆ ರಾಜಮಾತೆಯಾದಲ್ಲಿ ನಿನ್ನನ್ನು ದಾಸಿಯಂತೆ ಕಾಣುವಳು. ನೀನು ದಶರಥನ ಮನ ಮೆಚ್ಚಿದ ಮಡದಿಯಾಗಿ ಮೆರೆದವಳು. ಕೌಸಲ್ಯೆಯನ್ನು ಧಿಕ್ಕರಿಸಿ ನಡೆದವಳು ಈಗವಳು ಅದನ್ನು ತೀರಿಸಿಕೊಳ್ಳದೇ ಇರುವಳೇ? ದಶರಥನ ಮನ ಮೆಚ್ಚಿದ ಮಡದಿ ಎಂದು ಬೀಗುತ್ತಿದ್ದೆಯಲ್ಲಾ, ಅದನ್ನು ಈಗ ಪರೀಕ್ಷಿಸು ಎಂದು ಅವಳನ್ನು ಪ್ರಚೋದಿಸಿ ಕೈಕೆಯನ್ನು ರಾಮನ ವಿರುದ್ಧ ಹಾಗೂ ಅವನ ತಾಯಿಯ ವಿರುದ್ಧ ಎತ್ತಿ ಕಟ್ಟುವುದರಲ್ಲಿ ಯಶಸ್ವಿಯಾದಳು.

ದಶರಥ ತನ್ನ ಮನ ಮೆಚ್ಚಿದ ಮನದನ್ನೆಯ ದುಃಖವನ್ನು ನೋಡದಾದ ರಾಮನ ಮೇಲೆ ಆಣೇ ಇಟ್ಟು ಕೈಕೆಯ ಅಭೀಷ್ಟವನ್ನು ಈಡೇರಿಸುವುದಾಗಿ ಮಾತು ಕೊಟ್ಟು ನಂತರವೇ ಕೈಕೆ ತನ್ನ ವರವನ್ನು ಬೇಡಿದ್ದೂ (ಇದೂ ಮಂಥರೆ ಸಲಿಸಿದ್ದೇ). ರಾಮನಿಗೆ ವನವಾಸ, ಭರತನಿಗೆ ರಾಜ್ಯ. ದಶರಥ ಕೈಕೆಯ ಮನ ಒಲಿಸಲು ಸಾಕಷ್ಟು ಪ್ರಯತ್ನಿಸಿ ಸಾಧ್ಯವಾಗದಾಗ ಕೈಕೆಯನ್ನು ಶಪಿಸುತ್ತಾ, ಕೌಸಲ್ಯೆಯ ಗುಣಗಾನ ಮಾಡುತ್ತಾ ಕೌಸಲ್ಯೆಯ ಅರಮನೆ ಸೇರುತ್ತಾನೆ. ರಾಮನಿಗೆ ಕೈಕೆಯೇ ತನ್ನ ವರವನ್ನೂ ದಶರಥ ಮಹಾರಾಜ ಭಾಷೆ ಕೊಟ್ಟಿರುವುದನ್ನೂ ತಿಳಿಸುತ್ತಾಳೆ. ರಾಮ ಮೌನಿಯಾಗಿ ಪಿತೃ ವಾಕ್ಯ ಪರಿಪಾಲನೆಗೆ ಸಿದ್ಧನಾಗುತ್ತಾನೆ (ಮಾತೃ ವಾಕ್ಯ ಪರಿಪಾಲನೆಗಾಗಿಯಲ್ಲ).

ಇಲ್ಲಿ ದಶರಥ ಮಹಾರಾಜಾ ಹಾಗೂ ರಾಣಿ ಕೈಕೆ ಇಬ್ಬರೂ ಮಾಡಿದ ತಪ್ಪೆಂದರೆ ಭರತನ ಮನಸ್ಸನ್ನು ಅರ್ಥ ಮಾಡಿಕೊಳ್ಳದೇ ಹೋದದ್ದು. ಕೈಕೆ ಯಾವ ಭರತನಿಗಾಗಿ ವೈಧವ್ಯವನ್ನನುಭವಿಸಿದಳೋ, ಲೋಕ ನಿಂದೆಗೆ ಪಾತ್ರಳಾದಳೋ ಆ ಭರತನೇ ಅವಳನ್ನು ಧಿಕ್ಕರಿಸಿದ ದಶರಥನು ಮರಣ ಹೊಂದಿದ ಮೇಲೆ ಭರತನನ್ನು ಅಯೋಧ್ಯೆಗೆ ಕರೆ ತರುತ್ತಾರೆ. ತಂದೆ ಇಲ್ಲದ, ಅಣ್ಣನಿಲ್ಲದ ಅಯೋಧ್ಯೆಗೆ ಭರತ ಬಂದು ತಾಯಿಯ ಕೃತ್ಯವನ್ನೂ ಕೌಸಲ್ಯೆಯ ಮತ್ತು ಪುರಜನರ ಧಿಕ್ಕಾರಕ್ಕೆ ಗುರಿಯಾಗುತ್ತಾನೆ. ದಶರಥನ ಅಪರ ಕರ್ಮಾದಿಗಳನ್ನು ಮುಗಿಸಿದವನೇ ರಾಮನನ್ನು ಕರೆ ತರಲು ಪುರಜನ, ಗುರುಜನದೊಂದಿಗೆ ಹೊರಟಾಗ ನಿಂದಿತಳಾದ ಕೈಕೆಯೂ ಕೌಸಲ್ಯೆ ಸುಮಿತ್ರೆಯರೊಂದಿಗೆ ಮೌನವಾಗಿ ಹಿಂಬಾಲಿಸುತ್ತಾಳೆ. ಅವಳ ಕೃತ್ಯದಿಂದ ಅವಳಿಗೆ ಬಂದ ಭಾಗ್ಯ ಇಷ್ಟೇ. ತನ್ನ ಮಗನಿಂದಲೇ ಧಿಕ್ಕಾರ, ವೈಧವ್ಯವಲ್ಲದೆ ಮತ್ತೇನಿಲ್ಲ, ಎಲ್ಲವನ್ನೂ ಮೌನವಾಗಿ ಸಹಿಸಿದಳು. ಕೈಕೆ ಶಾಶ್ವತ ಮೌನಿಯಾದಳು. ಅವಳ ಪಾಲಿಗೆ ಎಲ್ಲವೂ ಅಂಧಕಾರಮಯವಾಯಿತು.

ಪಿತೃ ವಾಕ್ಯ ಪರಿಪಾಲಕನಾದ ರಾಮ ಕೈಕೆಯನ್ನಾಗಲೀ ರಾಮನನ್ನಾಗಲೀ ನಿಂದಿಸಲಿಲ್ಲ. ಭರತನ ಪ್ರಾರ್ಥನೆಯನ್ನು ನಿರಾಕರಿಸುತ್ತಾನೆ. ಮತ್ತು ತಂದೆಯಾದ ದಶರಥ ಕೈಕೆಯ ವಿವಾಹದ ವೇಳೆಯಲ್ಲಿ ಕೈಕೆಯ ರಾಜ ಅಶ್ವಪತಿಗೆ ಕೈಕೆಗೆ ಬದಲಾಗಿ ರಾಜ್ಯ ಶುಲ್ಕದ ವಾಗ್ದಾನ ಮಾಡಿದ್ದನ್ನೂ ಹೇಳಿ ತಂದೆಯನ್ನೂ ಸತ್ಯವಂತನನ್ನಾಗಿ ಮಾಡುವುದು ನಮ್ಮಿಬ್ಬರ ಕರ್ತವ್ಯ. (ವಾಗ್ದಾನದ ವಿಷಯ ರಾಮನಿಗೆ ಹೇಗೋ ತಿಳಿದಿತ್ತು). ನಾನು ವನವಾಸವನ್ನನುಭವಿಸುವೆ. ನೀನು ನಾನು ಬರುವವರೆಗೆ ಸತ್ ಪ್ರಜಾಪಾಲಕನಾಗಿ ರಾಜ್ಯವಾಳುವಂತೆ ಮರ್ಯಾದಾ ಪುರುಷೋತ್ತಮ ಭರತನ ಮನ ಒಲಿಸುತ್ತಾನೆ.

ಇಲ್ಲಿ ಯೋಚಿಸಬೇಕಾದ್ದೇನೆಂದರೆ ಕೈಕೆ, ಮಂಥರೆಯರು ನಿಶ್ಚಯವಾಗಿ ನಿಂದಾರ್ಹರೇ?

ಸತ್ಯವತಿ: ಶಂತನು ಚಕ್ರವರ್ತಿ ಸತ್ಯವತಿಯನ್ನು ಮೋಹಿಸಿ ದಾಸ ರಾಜನಲ್ಲಿ ಪ್ರಸ್ತಾಪಿಸಿದಾಗ, ದಾಸರಾಜ ಸತ್ಯವತಿಯಲ್ಲಿ ಜನಿಸಿದ ಮಗನಿಗೆ ರಾಜ್ಯ ಕೊಡುವುದಾದಲ್ಲಿ ಸತ್ಯವತಿ ನಿನ್ನವಳು ಎಂದು ಸವಾಲೆಸೆದಾಗ ಶಂತನು ನಿರುತ್ತರನಾದ. ಸತ್ಯವತಿಯ ವ್ಯಾಮೋಹವನ್ನು ಬಿಡಲಾರದ ಶಂತನು ವಿರಹದಲ್ಲಿ ಬಳಲುತ್ತಿದ್ದಾಗ ಪ್ರಾಪ್ತ ವಯಸ್ಕನಾಗಿದ್ದ ಶಂತನುವಿನ ಮಗ ದೇವವ್ರತ ಕಾರಣವರಿತು ದಾಸರಾಜನಲ್ಲಿಗೆ ಹೋಗಿ ಸಿಂಹಾಸನ ತ್ಯಾಗ ಹಾಗೂ ಸಂಸಾರ ತ್ಯಾಗದಂಥ ಭೀಷಣ ಪ್ರತಿಜ್ಞೆ ಮಾಡಿ ಭೀಷ್ಮನಾದ. ಮಗನಿಗೆ ಯೌವ್ವನದಲ್ಲಿ ಸಾಧಿಸಿದ ಜಿತೇಂದ್ರಿಯತೆ, ತಂದೆಗೆ ಮುಪ್ಪಿನಲ್ಲಿ ಸಾಧಿಸಲಿಲ್ಲವೆಂದರೆ ಇದನ್ನು ಮಿಥ್ಯಾಮೋಹ ಎನ್ನೋಣವೇ? ಇಲ್ಲಾ ಅವರವರ ಕರ್ಮವೆನ್ನೋಣವೇ? ದೇವವ್ರತ ಭೀಷ್ಮನಾಗದೆ ದೇವವ್ರತನಾಗೇ ಉಳಿದು ಸಿಂಹಾಸನವೇರಿದ್ದರೆ ಮಹಾಭಾರತದಂತಹ ಭೀಷಣ ಯುದ್ಧ ಆಗುತ್ತಿರಲಿಲ್ಲವೇನೋ!

ಸತ್ಯವತಿ ಶಂತನುವನ್ನು ವರಿಸಿ ಚಿತ್ರಾಂಗದ, ವಿಚಿತ್ರ ವೀರ್ಯರನ್ನು ಪಡೆದಳು. ಶಂತನುವಿನ ನಿಧನಾ ನಂತರ ಚಿತ್ರಾಂಗದ ಸಿಂಹಾಸನವೇರಿದ ಗಂಧರ್ವರಲ್ಲಿ ಕಾದಿ ಮಡಿದ ವಿಚಿತ್ರವೀರ್ಯ ಪಟ್ಟಕ್ಕೆ ಬಂದ ಇವನಿಗೆ ಕಾಶೀರಾಜನ ಪುತ್ರಿಯರನ್ನು ಭೀಷ್ಮ ತಂದು ವಿವಾಹ ಮಾಡಿದ ಮೂವ್ವರಲ್ಲಿ ಇಬ್ಬರು ವಿಚಿತ್ರ ವೀರ್ಯವನ್ನೊರಿಸಿದರು. ಹಿರಿಯಳಾದ ಅಂಬೆ ಭೀಷ್ಮನಿಗೆ ಸವಾಲಾಗಿ ತಪಸ್ಸಿಗೆ ತೆರಳಿದಳು. ವಿಚಿತ್ರ

(ಪುಟ 10ಕ್ಕೆ)

# ಇದು ನಮ್ಮ ಪ್ರಾಚೀನ ಭಾರತ - 2

• ಎಸ್. ಆನಂದಶಾಸ್ತ್ರೀ, ಮೈಸೂರು

ಹಂಸಗಳಿಗೆ ಮುತ್ತು (ಮುಕ್ತಿಕ) ಬಹಳ ಪ್ರಿಯವೆಂದು ನಮ್ಮ ಹಿಂದಿನವರು ಹೇಳುತ್ತಿದ್ದರು. ನಮ್ಮ ಹಳೆಯ ಭಿತ್ತಿ ಚಿತ್ರಗಳಲ್ಲಾಗಲೀ ಶಿಲ್ಪಗಳಲ್ಲಾಗಲೀ ಮುಖ್ಯವಾಗಿ 10-12ನೇ ಶತಮಾನಗಳವರೆಗೂ ಹಂಸವನ್ನು ಬಿಡಿಸುವಾಗ ಅದರ ಬಾಯಿಯಲ್ಲಿ ಮುತ್ತಿನ ಹಾರವನ್ನು ತೋರಿಸುತ್ತಿದ್ದರು. ಕೆಲವು ಕಾಲದ ನಂತರ ಅದು `ಸ್ಟೈಲೈಸ್ಡ್'(Stylised) ಆಗಿ ಪರಿವರ್ತನೆಯ ಫಲವಾಗಿ ವಿರೂಪಗೊಂಡಿದ್ದರೂ ಮುತ್ತಿನ ಹಾರವಿಲ್ಲದೆ ಹಂಸವೇ ಇಲ್ಲವೇನೋ ಅನ್ನುವಂತಾಯಿತು. ಕಾರಣ, ಸಂಪ್ರದಾಯ. ಸಂಪ್ರದಾಯ ಜನತೆಯ ಮನದಾಳದಲ್ಲಿ ನೆಲಸಿದ ಬದಲಾಗದ, ಬದಲಾಗಲು ಇಷ್ಟವೇ ಪಡದೆ ತನ್ನದೇ ರೀತಿಯಲ್ಲಿ ನಡೆಸಿಕೊಳ್ಳುವ ಮನೋಭಾವ.

ಈಗ ನಾವು ಎಲ್ಲಾ ಸಮಾರಂಭಗಳ ಉದ್ಘಾಟನೆಗಳಲ್ಲಿ ಉಪಯೋಗಿಸುವ ದೊಡ್ಡ ದೀಪದ ಕಂಬದ ಮೇಲೆ ಹಂಸವನ್ನು ಗಮನಿಸಬಹುದು. ಅದು ನಮಗೆ ಯವನರ ಕೊಡುಗೆಯೆಂದು ಪುರಾತತ್ವ ಜ್ಞಾನಿಗಳ ಹೇಳಿಕೆ. ಅದರ ಬಾಯಿಯಲ್ಲೂ ಮುಕ್ತಮಾಲೆ ಇರುತ್ತದೆ. ಹಂಸವು ನಮ್ಮ ಸಂಸ್ಕೃತಿಯ ಹಾಸು ಹೊಕ್ಕನಲ್ಲಿ ನಮಗೆ ಗೊತ್ತಿಲ್ಲದಂತೆ ಸಾವಿರಾರು ವರ್ಷಗಳಿಂದ ನಮ್ಮ ಮನದಾಳದ ಸುಪ್ತ ಚೇತನದಲ್ಲಿ ಅಳಿಸಲಾಗದ ಅರಿವಾಗಿ ಉಳಿದು ನಮ್ಮ ಸಾಹಿತ್ಯ ಕಲೆಗಳಲ್ಲಿ ನಿರಂತರವಾಗಿ ವ್ಯಕ್ತವಾಗುತ್ತಿದೆ. ನಮ್ಮ ಕಥಾ ಸಂಕಲನದ ಕಥಾ ಸರಿತ್‌ಸಾಗರ ಮತ್ತು ಗುಣಾಢ್ಯನ ಬೃಹತ್ ಕಥೆಯಲ್ಲೂ ಇದರ ಉಲ್ಲೇಖವಿದೆ.

ಇಂತಹ ಕಥಾ ಸರಿತ್ ಸಾಗರದಲ್ಲಿ ಹಂಸದ ಹಿರಿಮೆ ಬಗ್ಗೆ ಒಂದು ಕಥೆ ಇದೆ.

ಒಬ್ಬ ಐಶ್ವರ್ಯವಂತ ನಗರ ಶ್ರೇಷ್ಠಿಯ ಮಗಳು ಮದುವೆ ವಯಸ್ಸಿಗೆ ಬಂದಿದ್ದರೂ ಬಂದ ಗಂಡುಗಳನ್ನೆಲ್ಲಾ ನಿರಾಕರಿಸುತ್ತಾ ಯಾರನ್ನೂ ಒಪ್ಪುತ್ತಿರಲಿಲ್ಲ. ಕೊನೆಗೆ ಬೇರೆ ವಿಧಿಯಿಲ್ಲದೆ ಅವಳ ತಂದೆ-ತಾಯಿಗಳು `ನಿನಗೆ ಇಷ್ಟವಾದವನನ್ನು ನೀನೇ ಹುಡುಕಿಕೋ' ಎಂದು ಬಿಟ್ಟು ಬಿಟ್ಟರು. ಅವಳು ಒಂದು ದಿನ ತನ್ನ ಸೌಧದ ಉಪ್ಪರಿಗೆಯ ಬಾಲ್ಕನಿಯಿಂದ ಬಗ್ಗಿ ನೋಡುತ್ತಿದ್ದಾಗ ಕೆಳಗೆ ರಸ್ತೆಯಲ್ಲಿ ಹೋಗುತ್ತಿದ್ದ ಬಡವ ಆದರೆ ಸುಂದರ ಯುವಕನೊಬ್ಬನನ್ನು ಮೋಹಿಸಿ ಮದುವೆಯೂ ಆಯಿತು. ಆ ರಾತ್ರಿ ಮಲಗಿದ್ದಾಗ ಯುವಕನಿಗೆ ಇದ್ದಕ್ಕಿದ್ದ ಹಾಗೆ ಎಚ್ಚರವಾದಾಗ ವಿಚಿತ್ರ ದೃಶ್ಯವೊಂದು ಅವನಿಗಾಗಿ ಕಾದಿತ್ತು. ಪಕ್ಕದಲ್ಲೇ ಇಟ್ಟಿದ್ದ ಹೆಂಡತಿಯ ಮುತ್ತಿನ ಹಾರವನ್ನು ಹಂಸವೊಂದು ಅವನಿಗೆದುರಿಗೇ ಗುಳುಂ ಗುಳುಂ ಎಂದು ನುಂಗಿ ಮುಗಿಸಿತು. ಅಷ್ಟೇ ಅಲ್ಲ, ಅದು ಸಾಧಾರಣವಾದ ಹಂಸವಲ್ಲ. ವಾಪಸು ಹೋಗಿ ಗೋಡೆಯ ಮೇಲೆ ತಗಲು ಹಾಕಿದ್ದ ಚಿತ್ರಪಟದ ಹಂಸದಲ್ಲಿ ವಿಲೀನವಾಯಿತು! ಬೆಳಿಗ್ಗೆ ಅವಳು ತನ್ನ ಮುತ್ತಿನ ಹಾರ ಕಾಣದೆ ತಂದೆ-ತಾಯಿಗಳಲ್ಲಿ ದೂರಿತ್ತಳು. ಅವಳ ಪತಿ ತಾನು ಕಣ್ಣಾರೆ ಕಂಡದ್ದನ್ನು ಹೇಳಿದರೂ, ಕೇಳುವವರ್ಯಾರು? ನಂಬುವವರ್ಯಾರು? ಹೇಳಿ ಕೇಳಿ ಬಡವ - ಬಡವನನ್ನು ಕಂಡರೆ ಬಿಲ್ವ ಪತ್ರೆಯೂ ಬುಸ್ಸೆನ್ನುತ್ತದಂತೆ! ಮತ್ತೆ ಪರೀಕ್ಷಿಸಿದಾಗಲೇ ಅದು ನಿಜವೆಂದು ಕಂಡು ಬಂತೆಂದು ಕಥೆಯು ಹೇಳುತ್ತದೆ. ಅಂತೂ ಚಿತ್ರಪಟದ ಹಂಸಕ್ಕೂ ಮುತ್ತಿನ ಮೇಲಿನ ಮೋಹ ಬಿಟ್ಟಿದ್ದಲ್ಲ! ಚಿತ್ರದ ಹಂಸವೂ ಮುತ್ತಿಗಾಗಿ ಹಂಬಲಿಸುತ್ತದೆ ಅನ್ನುವ ಮನೋಭಾವ ನಮ್ಮಲ್ಲಿ ಬೇರೂರಿದೆ.

ಅದರಂತೆಯೇ ``ಹಂಸಕ್ಷೀರ ನ್ಯಾಯ''. ನಮ್ಮ ಮನೆಗೆ ಭಯ್ಯಾ ತರುವ ನೀರು ನಿಪ್ಪಟ್ಟೆ ಹಾಲಿನಲ್ಲೂ, ಹಂಸವು ಹಾಲಿನ ಭಾಗವನ್ನು ಮಾತ್ರ ಹೀರುತ್ತದೆ ಅಂತ ದೊಡ್ಡವರು ಕಾಲ್ಪನಿಕ ಅಥವಾ ಕಾವ್ಯಾರ್ಥವಾಗಿ ಹೇಳುತ್ತಿದ್ದರೂ ಹುಡುಗರಾಗಿದ್ದಾಗ ನಾವು ನಂಬುತ್ತಿರಲಿಲ್ಲವೇ ಹಾಗೆ! ಈ ರೀತಿಯ ಕಲ್ಪನೆಗಳು ಪ್ರತಿ ಜನಾಂಗದ ಅಂತರಾಳದ ಮಗುವಿನಂತಹ ಮನೋಭಾವಕ್ಕೆ ಒಗ್ಗಿ ಬಂದಿರುತ್ತದೆ. ಇದಕ್ಕೆ ಮಿಥ್ (Myth) ಎನ್ನುತ್ತಾರೆ.

ಇದೇ ರೀತಿ ನವಿಲಿನ ಬಗ್ಗೆಯೂ ಬೌದ್ಧ ಸಾಹಿತ್ಯದ ಪಾಲಿ ಭಾಷೆಯಲ್ಲಿ ಒಂದು ಸುಂದರ ಕಥೆಯಿದೆ. ಕಥೆಯೇನು, ನಿಜ ಸಂಗತಿಯ ಕಥಾರೂಪ. ಭಗವಾನ್ ಬುದ್ಧನ ತಥಾಕಥಿತ ಪೂರ್ವ ಜನ್ಮಗಳ ಕಥೆಗಳೇ ಬುದ್ಧ ಜಾತಕಗಳು. ಅವು 500ಕ್ಕಿಂತ ಮಿಗಿಲಾಗಿವೆ. ಜಾತಕಗಳ ಕಾಲ ಕ್ರಿ.ಶ. 3-4 ಶತಮಾನಗಳೆಂದು ವಿದ್ವಾಂಸರ ಅಭಿಪ್ರಾಯವಾದರೂ ನಮ್ಮ ಈ ಬಾವೇರು ಜಾತಕದಲ್ಲಿ ಬರುವ, ನವಿಲನ್ನು ಬೇರೆ ದೇಶಗಳಿಗೆ ರಫ್ತು ಮಾಡುವ ಪ್ರಸಂಗ, ಜಾತಕಗಳ ಕಾಲವನ್ನು ಹಿಂದಕ್ಕೆ ತಳ್ಳುತ್ತದೆ. ಏಕೆಂದರೆ ಕ್ರಿಸ್ತ ಶಕೆಯ ಪ್ರಥಮ ಶತಮಾನದ ಹಿಂದೆ ಮುಂದಿನ ವರ್ಷಗಳಲ್ಲಿ ನಾವು ರೋಮ್ ಸಾಮ್ರಾಜ್ಯಕ್ಕೆ ನವಿಲು ಮತ್ತು ಕೋತಿ (ಮಂಗ)ಯನ್ನು ಕಳಿಸುತ್ತಿದ್ದೆವೆಂದು ದಾಖಲೆ ಇದೆ.

ಬಾವೇರು ಕೆಂಪು ಸಮುದ್ರದಲ್ಲಿ ಅರಬ್ ಪರ್ಯಾಯ ದ್ವೀಪದ ಹತ್ತಿರ ಇರುವ ಬಹರೇನ್ ಎಂದೂ ಬ್ಯಾಬಿಲಾನ್ ನಗರ ಅಲ್ಲವೆಂದೂ ಪುರಾತತ್ವಜ್ಞಾನಿ ಶ್ರೀ ಎಂ. ಎನ್. ದೇಶಪಾಂಡೆಯವರು ಅಭಿಪ್ರಾಯ ಪಡುತ್ತಾರೆ.

ಈಗಿನ ನಮ್ಮ ಜನಕ್ಕೆ ಸಾಧಾರಣವಾಗಿ ಅಷ್ಟು ಅರಿವಿಲ್ಲದಿದ್ದರೂ 4000 ವರ್ಷಗಳ ಹಿಂದೆಯೇ ಅಂದರೆ ಕ್ರಿ. ಪೂ. 2500ರಿಂದಲೇ ನಮಗೆ ಪಶ್ಚಿಮ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧ ಇತ್ತು. ನಮ್ಮ ನಾವಿಕರು ದೂರ ದೂರ ದೇಶಗಳಿಗೆ ಹೋಗುತ್ತಿದ್ದರೆಂದು ಪುರಾತತ್ವ ಸಂಶೋಧನೆಯಿಂದ ತಿಳಿಯುತ್ತದೆ. ಮುಖ್ಯವಾಗಿ ಕ್ರಿ. ಪೂ. 2500-2350ರಲ್ಲಿ ಸಿಂಧೂ ಘಾಟಿಯ ಅರ್ಥಾತ್ ಹರಪ್ಪ-ಮೊಹೆಂಜೋದಾರೋ ಸಂಸ್ಕೃತಿಯ ದಿನಗಳಲ್ಲಿ ಈಗಿನ ಇರಾಕ್‌ನ ಯೂಫ್ರಟಿಸ್-ಟೈಗ್ರಿಸ್ ನದಿ ಘಾಟಿಯ ಮೆಸಪೊಟೇಮಿಯನ್ ಸಂಸ್ಕೃತಿಯ ಜೊತೆ ಸಂಬಂಧವಿತ್ತು. ಆ ಯವಳ ನದಿಗಳ ಸಹ್ಯಡೆ ಕ್ರಿ. ಪೂ. 2500ರಲ್ಲೇ ಬಹಳ ಮುಂದುವರಿದಿದ್ದು ಸಾವಿರ ವರ್ಷಗಳ ಮುಂದೆಯೂ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಹಮ್ಮುರಬಿಯಂತಹ ಶಾಸನಕಾರ, ಬ್ಯಾಬಿಲಾನ್ ನಂತಹ ನಗರ, ಬಲಶಾಲಿ ಹಿಟೈಟ್ (Hittite) ಜನರ ರಾಜ್ಯ ಇತ್ಯಾದಿಗಳಿಂದ ಹೆಸರುವಾಸಿಯಾಯಿತು.

ನಮ್ಮ ಹರಪ್ಪ ಸಂಸ್ಕೃತಿಯ ಸಮಕಾಲೀನರಾಗಿದ್ದ ಅವರುಗಳ ಎಸ್ಟಾರ್ಟೆಸ್ (Estartes) (ಶುಕ್ರದೇವತೆ, ವೀನಸ್)ನ ದೇವಾಲಯಗಳಲ್ಲಿ ನಮ್ಮವರ ಹೆಸರುಗಳು ದಾಖಲೆಯಾಗಿವೆ. ಅಲ್ಲಿರುವ ಸಾವಿರಾರು ಮಣ್ಣಿನ ಹಲಗೆ (Tablet ಟ್ಯಾಬ್ಲೆಟ್) ಮೇಲೆ ಬರೆದ ದಾನಪಟ್ಟಿ ದಾಖಲೆಗಳಲ್ಲಿ ಕೆಲವು ``ಪೂರ್ವ ದಿಕ್ಕಿನ ಸೂರ್ಯೋದಯ ರಾಜ್ಯ'', ``ಐಶ್ವರ್ಯಭರಿತ ಮೆಲುಹಾ''ದಿಂದ ಬಂದ ಇಂತಹ ವ್ಯಾಪಾರಿ ಇಂತಿಷ್ಟು ದನ, ಹಂದಿ, ಧನ ಇತ್ಯಾದಿ ದಾನ ಮಾಡಿದ್ದಾರೆ ಎಂದು ತಿಳಿಸುತ್ತವೆ. ಪುರಾತತ್ವ ಜ್ಞಾನಿಗಳು ``ಮೆಲುಹಾ'' (Meluha/Melluha) ನಮ್ಮ ಹರಪ್ಪ ಸಂಸ್ಕೃತಿಯೆಂದು ಊಹಿಸುತ್ತಾರೆ. ಅದರ ಜೊತೆ ಜೊತೆಯಲ್ಲಿ ಬರುವ ``ದಿಲ್‌ಮುನ್'' (Dilmun), ಬಹ್ರೇನ್ (Bahrain) ಇರಬೇಕೆಂದು ಅವರ ಅಭಿಪ್ರಾಯ. ಸೋಜಿಗವೇನೆಂದರೆ ನಾವು ಭಾರತೀಯ ಪುರಾತತ್ವ ಸರ್ವೆಯವರು ಉತ್ತರ ರಾಜಸ್ಥಾನದಲ್ಲಿ,

ಹಿಂದೆ ವೇದಗಳ ಕಾಲದ, ಈಗ ಬತ್ತಿಹೋದ ಸರಸ್ವತಿ ನದಿಯ ಪಾತ್ರದ ``ಕಾಲೀ ಬಂಗಾ"ದ ಹರಪ್ಪ ಸಂಸ್ಕೃತಿಯ ಊರನ್ನು ಅಗೆಯುತ್ತಿದ್ದಾಗ ನದಿಯ ಆಚೆ ದಡದ ಹಳ್ಳಿಯ ಹೆಸರೂ ``ದಿಲ್‌ಮುನ್" ಅಂತ ತಿಳಿದದ್ದು! ಉತ್ಸಾಹದಿಂದ ಅಲ್ಲಿ ಹೋಗಿ ಹಾಳು ಸುರಿಯುತ್ತಿದ್ದ ಪುಟ್ಟ ಹಳ್ಳಿಯನ್ನು ನೋಡಿಯೂ ಬಂದೆವು.

ಬಹರೇನ್ ದ್ವೀಪದ ಚರಿತ್ರೆಯೂ ಗಮನಾರ್ಹವಾಗಿದೆ. ಅದು ಹರಪ್ಪ ಮತ್ತು ಮೆಸಪೊಟೇಮಿಯಾದ ಮಧ್ಯೆ ಇದ್ದು ಎರಡು ಸಂಸ್ಕೃತಿಗಳನ್ನೂ ವ್ಯಾಪಾರದಿಂದ ಜೋಡಿಸಿತು. ಈಗ ಹರಪ್ಪ ಸಂಸ್ಕೃತಿಯ ಸಮಕಾಲೀನರಾಗಿದ್ದ ಬಲೂಚಿಸ್ತಾನ (ಪಾಕಿಸ್ತಾನ)ದ ಕುಲ್ಲಿ ಸಂಸ್ಕೃತಿಯ ಜನ ಹರಪ್ಪದೊಡನೆ ವ್ಯಾಪಾರ ಸಂಬಂಧಪಟ್ಟುಕೊಂಡಿದ್ದೇ ಅಲ್ಲದೆ ಅದೇ ಜನ ಬಹರೇನ್‌ನ ನಿವಾಸಿಗಳೂ ಆಗಿದ್ದರಿಂದ ಇಬ್ಬರ ಮಧ್ಯೆ ಮಧ್ಯವರ್ತಿಗಳಾಗಿ (ಏಜೆಂಟ್) ವ್ಯಾಪಾರ ಮಾಡುತ್ತಿದ್ದರು. (ಈಗ ನಮ್ಮ ಸಿಂಧಿಗಳು ಅಲ್ಲಿ ಇದ್ದಂತೆ). ಅದರಿಂದಲೇ ಬಹರೇನ್‌ನಲ್ಲಿ ಆಗಿನ ಕುಲ್ಲಿ ಜನರ ಗೋರಿಗಳು ತುಂಬಿವೆ. ಮತ್ತೊಂದು ಸಂಗತಿಯೆಂದರೆ ಉಪ್ಪಿನ ನೀರೇ ತುಂಬಿದ ಆ ಅರಬ್ ರಾಜ್ಯಗಳ ಪರಿಸರದಲ್ಲಿ ಅವತ್ತಿನಿಂದ ... ಇವತ್ತಿಗೂ ಕೇವಲ ಬಹ್ರೇನ್ ದ್ವೀಪದಲ್ಲಿ ಸಿಹಿ ನೀರು ಲಭ್ಯವಿದೆ! ಅದರಿಂದಲೇ ಅದು ಹಡಗುಗಳ ಮುಖ್ಯ ತಾಣವಾಯಿತು.

ಬೌದ್ಧ ಕಾಲದಲ್ಲಿ ಅದರಲ್ಲೂ ಮುಖ್ಯವಾಗಿ ಈಸಾಯೀ ಪ್ರಥಮ ಸಂವತ್ಸರದ ಹಿಂದು ಮುಂದಿನ ಶತಮಾನಗಳಲ್ಲಂತೂ ನಮ್ಮ ವ್ಯಾಪಾರದ ವಹಿವಾಟು ಬಹಳ ಜೋರಾಗಿರಬೇಕು.

ಬೌದ್ಧ ಸಾಹಿತ್ಯದಲ್ಲಿ ಅದಕ್ಕೆ ಬಹಳ ಪುರಾವೆ ಸಿಗುತ್ತದೆ. ಹೊರ ದೇಶಗಳು ನಮ್ಮ ವಿಷಯ ಬರೆದಿರುವುದೂ ಉಂಟು. ಬೌದ್ಧ, ಜೈನ ಮತಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದು ಆಗ ಅವುಗಳ ರಕ್ಷಣೆಗಾಗಿ ಶ್ರೀಮಂತರು ಬಹಳೆ ದಾನವನ್ನು ಮಾಡುತ್ತಿದ್ದರು. ಕೇವಲ ಅದಕ್ಕಾಗಿಯೇ ಧನ ಸಂಪಾದನೆ ಮಾಡಲು ಸುವರ್ಣ ದ್ವೀಪ (ಇಂಡೋನೇಶಿಯಾದ ಸುಮಾತ್ರ) ಇತ್ಯಾದಿ ದೇಶಗಳಿಗೆ ಹಡಗುಗಳನ್ನು ಕಳುಹಿಸಿ ಬಹಳ ದ್ರವ್ಯವನ್ನು ಸಂಪಾದಿಸುತ್ತೇವೆಂದು ಹೇಳುವ ವರ್ತಕರೂ ಇದ್ದರು.

ಬಾವೇರು ಜಾತಕದ ಭಾರುಕಚ್ಛ (ಭೃಗುಕಚ್ಛ) ಈಗಿನ ದಕ್ಷಿಣ ಗುಜರಾತಿನ ನರ್ಮದಾ ತೀರದಲ್ಲಿನ ಭರೂಚ್ ಆಗಿತ್ತು. ಭೃಗು ಮಹರ್ಷಿಯ ಸ್ಥಾನವಾದ ಕೊಚ್ಚೆ ಪ್ರದೇಶದಿಂದಲೇ ಮೇಲೆ ಬೆಳೆದು ಬಂದ ಈ ನಗರ ಮಥುರಾ, ಕಾಶಿ (ವಾರಾಣಾಸಿ)ಗಳಂತೆ ಆಗಿನಿಂದ ಈಗಿನವರೆಗೂ ನಿರಂತರವಾಗಿ ಜೀವಿತವಾಗಿರುವ ಪ್ರಾಚೀನ ನಗರಗಳಲ್ಲೊಂದಾಗಿದೆ.

ಈ ಜಾತಕದ ಕಥೆಗೆ ನಾವು ನೀವು ಮಾತನಾಡುವಂತೆ ಪ್ರಥಮ ಪುರುಷ ಉಪಯೋಗಿಸುವುದರಿಂದ ಹೆಚ್ಚು ಕಳೆ ತಂದಿದೆ.

`ವಾರಾಣಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ ಭಾರುಕಚ್ಛದಲ್ಲಿ ಭಗವಾನ್ ಬುದ್ಧನು ನಾವಿಕನ ಮಗನಾಗಿ ಜನಿಸಿದನು. ನಾವು ಬಾವೇರುವಿಗೆ ವ್ಯಾಪಾರಕ್ಕಾಗಿ ಹಡಗಿನಲ್ಲಿ ಹೊರಟು ಬಹಳ ದಿನಗಳು ಪ್ರಯಾಣ ಮಾಡಿದ ನಂತರ ತಲುಪಿದೆವು. ಹಡಗಿನಿಂದ ಇಳಿದು ಸಾಮಾನಿನ ಜೊತೆ ನಾವು ತಂದಿದ್ದ ನವಿಲೊಂದನ್ನು ನೆಲದ ಮೇಲೆ ಬಿಟ್ಟಾಗ ಬಹಳ ದಿನಗಳಿಂದಲೇ ನೆಲವನ್ನೇ ಕಾಣದ ಆ ಬಡಪಾಯಿ ಪಕ್ಷಿ ಸಂತೋಷದಿಂದ ಕೇಕೆ ಹಾಕುತ್ತಾ ರೆಕ್ಕೆಯನ್ನು ಅಗಲವಾಗಿ ಬಿಚ್ಚಿ ನೃತ್ಯ ಮಾಡತೊಡಗಿತು. ಇದನ್ನು ನೋಡಿದ ಆ ಜನ, ನಾವು ಹಡಗಿನಲ್ಲಿ ಸಾಕುವ `ದಿಶಾಕಾಕ'ವನ್ನು ನೋಡಿಯೇ ಆಶ್ಚರ್ಯ ಪಡುತ್ತಿದ್ದ ಆ ಜನ, ಈ ಸುಂದರ ನವಿಲನ್ನು ನೋಡಿ ಹುಚ್ಚೆದ್ದರು. ಸುದ್ದಿ ತಿಳಿದ ಆ ದೇಶದ ರಾಜ ಓಡಿ ಬಂದು ನೋಡಿ ಅತೀವ ಸಂತೋಷದಿಂದ (ಆ ಪೆದ್ದಣ್ಣ) ಅದರ ಮುಂದೆ ನಮಸ್ಕಾರವೇ ಮಾಡಿದ. ``ಈ ಪಕ್ಷಿಯನ್ನು ನಮಗೆ ಕೊಡಿ, ನೀವು ಕೇಳಿದಷ್ಟು ಚಿನ್ನದ ನಾಣ್ಯ (ಕಾರ್ಷಾಪಣ) ಚೆಲ್ಲುತ್ತೇನೆ" ಅಂತ ಬೇಡಿಕೊಂಡ. ಸತಾಯಿಸಿ ಸತಾಯಿಸಿ ನಮಗೆ ಕೊಡಲು ಇಷ್ಟವೇ ಇಲ್ಲವೇನೋ ಅನ್ನುವಂತೆ ಮುಖ ತಿರುಗಿಸಿ ಕೊಂಡು ಕೊನೆಗೆ ಹೋಗಲಿ ಅಂತ ಬಲವಂತನಾಗಿ ಕೊಟ್ಟಂತೆ ಮಾಡಿದೆವು. ಅಂದಿನಿಂದ ನಾವು ನವಿಲನ್ನು ಈ ದೇಶಗಳಿಗೆ ರಫ್ತು ಮಾಡಲು ನಿಶ್ಚಯಿಸಿದೆವು.

ಹಾಗಾದರೆ ``ದಿಶಾಕಾಕ" ಏನು? ಅದು ಒಂದು ಸಾಧಾರಣ ಪಕ್ಷಿ. ಆಗಿನ ಕಾಲದಲ್ಲಿ ಸಮುದ್ರ ಪ್ರಯಾಣಕ್ಕೆ ಈಗಿನ ಆಧುನಿಕ ಯುಗದಂತೆ ನಾವಿಕರಿಗೆ ಅನುಕೂಲವಾಗುವಂತೆ ದೂರ್ಬಿನು (ಟೆಲಿಸ್ಕೋಪ್) ದಿಕ್ಸೂಚಿ (ಮ್ಯಾಗ್ನೆಟಿಕ್ ಕಂಪಾಸ್)ಯಾಗಲಿ, ಸೆಕ್ಸ್ಟೆಂಟ್ (Sextant) ಆಗಲೀ ಇರಲಿಲ್ಲ. ಕೇವಲ ಅನುಭವವೇ ಮಾರ್ಗವಾಗಿತ್ತು. ಸಮುದ್ರದಲ್ಲಿ ಎತ್ತಲೋ ಹೋಗುತ್ತಿರುವಾಗ ಭೂಮಿಯು ಹತ್ತಿರದಲ್ಲಿದ್ದರೆ ಎತ್ತ ಕಡೆ ಇದೆ ಅನ್ನಲು ಕೆಲವು ಸಂಜ್ಞೆಗಳನ್ನು ಅರಿತಿದ್ದರು. ಭೂಮಿ ಹತ್ತಿರವಾಗಿದ್ದರೆ ಎತ್ತ ಕಡೆ ಇದೆ ಅನ್ನಲು ಕೆಲವು ಸಂಜ್ಞೆಗಳನ್ನು ಅರಿತಿದ್ದರು. ನೀರು ಬಗ್ಗಡವಾಗಿರುತ್ತದೆ. ಆಳ ಕಮ್ಮಿಯಿರುವುದರಿಂದ ನೀರಿನ ಬಣ್ಣದಲ್ಲಿ ಬದಲಾವಣೆ ಇರುತ್ತದೆ. ಭೂಮಿಯಿಂದ ಬಂದು ಸಮುದ್ರದಲ್ಲಿ ಬಿದ್ದ ಮರದ ತುಂಡು, ಕಸ, ತೆಂಗಿನ ಮೊಟ್ಟೆ ಇತ್ಯಾದಿ ಏನೇನೋ ತೇಲುತ್ತಿರುವ ವಸ್ತುಗಳು (Floatsam ಫ್ಲಾಟ್‌ಸ್ಯಾಮ್) ಕಾಣ ಸಿಗುತ್ತವೆ. ಅದರೆ ಭೂಮಿ ದಿಗಂತದಿಂದ ಆಚೆ ನಮ್ಮ ದೃಷ್ಟಿಯಿಂದಾಚೆ ಇದ್ದರೆ? ಅದಕ್ಕಾಗಿ ನಮ್ಮ ನಾವಿಕರು ತಮ್ಮ ಹಡಗುಗಳಲ್ಲಿ ಈ ಪಕ್ಷಿಗಳನ್ನು ಸಾಕುತ್ತಿದ್ದರು. ಅವು ಹಡಗಿನ (ನಾವೆಯ) ಮಧ್ಯದ ಎತ್ತರವಾದ ಸ್ತಂಭ (Mast ಮ್ಯಾಸ್ಟ್) ಮೇಲೆ ತಮಗಾಗಿ ಮಾಡಿರುವ ಜಾಗ (Perch ಪರ್ಚ್)ದಲ್ಲಿ ಕುಳಿತು, ಭೂಮಿಯು ಹತ್ತಿರ ಬರುವುದು ಕಂಡಾಗ ಆ ಕಡೆಗೆ ಹಾರಿ ಹೋಗಿ ತಲುಪಿ ಮತ್ತೆ ವಾಪಸು ಬರುತ್ತಿದ್ದವು.

'ಅಷ್ಟೂ ಈ ಜನರಿಗೆ ಗೊತ್ತಿಲ್ಲ' ಎಂದು ನಮ್ಮವರ ಕುಚೋದ್ಯ!

ಇಂತಹ ಸುಂದರ ಪಕ್ಷಿ ನಮ್ಮಲ್ಲಿದ್ದರೂ ನಮಗೆ ಅದರ ಬಗ್ಗೆ ಗಣನೆಯಿಲ್ಲ, ಆದರವಿಲ್ಲ. ಯಾವ ವಸ್ತುವೇ ಆಗಲಿ ಅದು ಎಷ್ಟೇ ಘನವಾಗಿದ್ದರೂ ಎಷ್ಟು ಸಮೀಪದಲ್ಲಿರುತ್ತದೆಯೋ ಅಷ್ಟೇ ಅದರ ಬೆಲೆ ಕೆಳಕ್ಕೆ ಇಳಿಯುತ್ತದೆ. ನಮ್ಮ ಪಶ್ಚಿಮ ಭಾರತದಲ್ಲಿ ಮುಖ್ಯವಾಗಿ ರಾಜಸ್ಥಾನ ಮತ್ತು ಮಾಲವಾ (ಈಗಿನ ಮಧ್ಯ ಪ್ರದೇಶದ ಪಶ್ಚಿಮ ಭಾಗ)ದಲ್ಲಿ ನವಿಲುಗಳು ವಿಪುಲವಾಗಿವೆ. ಹಿಂದೆ ನಾನು ರಾಜಸ್ಥಾನದ ಭರತಪುರ್, ಅಲ್ವರ್ ಸಮೀಪದ ಅಲ್ಲಿನ ಸರಿಸ್ಕಾ ಹುಲಿಯ ಅಭಯಾರಣ್ಯ (Sariska Tiger Reserve)ದ ಒಳಗೆ ಪುರಾತತ್ವ ಸಂಶೋಧನೆಯ ಅಂಗವಾಗಿ ನಮ್ಮ ರಾಷ್ಟ್ರೀಯ ಸ್ಮಾರಕಗಳಾದ ಅಲ್ಲಿನ ಹಳೆಯ ಕಾಲದ ದೇವಾಲಯಗಳ ಸಂಶೋಧನೆಗಳಲ್ಲಿ ತೊಡಗಿದ್ದೆ. ಆ ಧೂಳು ತುಂಬಿದ ಒರಟು ನೆಲದ ದೇವಸ್ಥಾನಗಳನ್ನು ಗುಡಿಸಲು ಅಲ್ಲಿಯ ಜನರು ಈಚಲು ಬರಲು ಅಥವಾ ಇನ್ನಿತರ ಕಸಬರಿಗೆ (ಪರಕೆ) ಉಪಯೋಗಿಸುತ್ತಿರಲಿಲ್ಲ. ಯಾವ ಭಾವ ವಿಭೋರಕ್ಕೂ ಒಳಗಾಗದೆ ಯುಕ್ತಾಯುಕ್ತ ವಿವೇಚನೆಯನ್ನು ಬದಿಗಿಟ್ಟು ಸುಂದರವಾದ ಆ ನವಿಲುಗರಿಗಳನ್ನೇ ಕೂಡಿಸಿ ದೊಡ್ಡ ಕಂತೆ ಮಾಡಿ ಕಸ ಉಡುಗುತ್ತಿದ್ದುದನ್ನು ನೋಡಿ ``ಅಯ್ಯೋ ನವಿಲೆ! ನಿನ್ನ ಸುಂದರ ಗರಿಗಳಿಗೆ ಈ ಅವಸ್ಥೆಯೇ!" ಅಂತ ಖೇದವಾಗುತ್ತಿತ್ತು. ಪುಸ್ತಕದ ಹಾಳೆಗಳ ಮಧ್ಯೆ ನವಿಲುಗರಿಯನ್ನು ಜೋಪಾನವಾಗಿ ಕಾದಿಡುವ ಮಕ್ಕಳು (`ಮರಿಹಾಕುತ್ತೆ!') ಅದನ್ನು ನೋಡಿ ಅತ್ತೇ ಬಿಡುತ್ತವೆಯೇನೋ? ನೆಂಟರಿಗೆ ಅತಿ ಹತ್ತಿರ ಇರಬೇಡ,

(ಪುಟ 10ಕ್ಕೆ)

# ದೇವರು - ಒಂದು ಅಭಿಪ್ರಾಯ

ಮಾನವ ಶಕ್ತಿಯನ್ನು ಮೀರಿದ ಶಕ್ತಿಯೊಂದಿದೆ. ಅದೇ ದೈವಶಕ್ತಿ. ಅದು ಅಗೋಚರ. `ತೃಣಮಪಿ ನ ಚಲತಿ ತೇನವಿನಾ' - ಈ ನಂಬಿಕೆ ಭಾರತೀಯ ಜನಮನದಲ್ಲಿ ಹಾಸು ಹೊಕ್ಕಾಗಿದೆ. ಆದ್ದರಿಂದಲೇ ನಮ್ಮ ದೇಶ ಧಾರ್ಮಿಕ ನೆಲೆಗಟ್ಟಿನ ಮೇಲೆ ನಿಂತ ದೇಶವೆಂಬ ಹೆಸರು ಪಡೆದಿರುವುದು.

ದೇವರು, ಧರ್ಮ, ಪೂಜೆ ಈ ಅಂಶಗಳು ಎಷ್ಟರಮಟ್ಟಿಗೆ ಬೇರೂರಿವೆ ಎಂದರೆ, ಬೆಳಿಗ್ಗೆ ಏಳುವಾಗ ಬಲಭಾಗದಿಂದಲೇ ಎದ್ದು, ದೇವರ ಫೋಟೋ ನೋಡಿಯೇ ಮುಂದಿನ ಕೆಲಸದಲ್ಲಿ ತೊಡಗಬೇಕು, ಇಲ್ಲದಿದ್ದರೆ ಆ ದಿನವಿಡೀ ಕೆಡುಕುಗಳೇ ಸಂಭವಿಸುತ್ತವೆ, ಎಂಬ ನಂಬಿಕೆ ಮಿಕ್ಕ ಇತರ ಕರ್ತವ್ಯಗಳಷ್ಟೇ ಪ್ರಾಮುಖ್ಯತೆ ಪಡೆದಿದೆ. ನಮ್ಮ ಹಿರಿಯರು ಬಾಲ್ಯದಿಂದ ಈ ನಂಬಿಕೆಯ ಬೀಜವನ್ನು ಏಕೆ ಬಿತ್ತಿದರು? ಅದರಂತೆಯೇ ಏಕೆ ನಡೆಯಬೇಕು? ಇದರ ಬಗ್ಗೆ ತಾರ್ಕಿಕವಾಗಿ ಚಿಂತಿಸುವ ಶಕ್ತಿಯನ್ನೇ ಕಳೆದುಕೊಂಡಿರುವ ನಾವು ವಿವೇಕಶೂನ್ಯರೇ? ಆಲೋಚನಾ ಸಾಮರ್ಥ್ಯ ನಮ್ಮಲ್ಲಿ ಇಲ್ಲವೇ? ಎಂಬ ಹಲವಾರು ಪ್ರಶ್ನೆಗಳು ಇದರ ಬಗ್ಗೆ ಬರೆಯಲು ತೊಡಗಿದಾಗ ನನ್ನನ್ನು ಕಾಡುತ್ತವೆ.

ಈ ವೈಜ್ಞಾನಿಕ ಯುಗದಲ್ಲಿಯೂ ದೇವರು, ಧ್ಯಾನ ವ್ರತ, ಉಪವಾಸ ಇವು ನಮ್ಮ ಜೀವನದಲ್ಲಿ ಪ್ರಭಾವಕಾರಿ ಶಕ್ತಿಗಳಾಗಿರುವುದೇತಕ್ಕೆ? ಎಂಬ ಪ್ರಶ್ನೆಗೆ ನನ್ನ ಗುರುಗಳೊಬ್ಬರು ತಮ್ಮ ಅಭಿಪ್ರಾಯ ಸೂಚಿಸುತ್ತಾ, ಭವಿಷ್ಯ ಜನಾಂಗಕ್ಕೆ ಅಂದರೆ ನಮ್ಮ ಕಿರಿಯರಿಗೆ `ದೇವರ ಫೋಟೋ ನೋಡಿ, ಧ್ಯಾನ ಮಾಡಿ, ನಂತರ ಮುಂದಿನ ಕೆಲಸದಲ್ಲಿ ತೊಡಗು' ಎಂಬ ಅಭ್ಯಾಸವನ್ನೇ ಮಾಡದೇ ಇದ್ದರೆ, ಈ ದೇವರು ಎಂಬ ಬಗ್ಗೆ ನಂಬಿಕೆ, ಅಥವಾ ಭಯ ಮೂಡದೇ ಇರಬಹುದು. ತರ್ಕಬದ್ಧ ಚಿಂತನೆ ಅವರಿಗೆ ಸಾಧ್ಯವಾಗಬಹುದು ಎಂದು. ಆದರೆ ದೈವೀಶಕ್ತಿಯನ್ನು ಮೀರಿ ನಡೆದರೆ ಆಗುವ ಪರಿಣಾಮ? ಇದು ಭಕ್ತಿಗಿಂತಲೂ ಭಯವಾಗಿ ನಮ್ಮಲ್ಲಿ ಭದ್ರ ತಳಪಾಯದೊಂದಿಗೆ ಬೆಳೆದು ಬಂದಿದೆ. ಜೀವನದಲ್ಲಿ ಸಮಸ್ಯೆಗಳು, ಎದುರಾದಾಗ ಇದರ ಪರಿಹಾರ ನಮ್ಮ ಕೈಯ್ಯಲಿಲ್ಲ. `ದೈವೇಚ್ಛೆ' ಎಂದು ಹೇಳಿ ಪಲಾಯನವಾದಿಯೆನಿಸಿಕೊಳ್ಳುವ, ಹೋಮ, ಪೂಜೆ, ನಡೆಸಿ ಒಳಿತನ್ನು ನಿರೀಕ್ಷಿಸುವ ಈ ಮನೋಭಾವಕ್ಕೆ ಅಡಿಪಾಯ ಹಾಕಿರುವುದು `ಸಾಹಿತ್ಯ' ಎಂಬ ನನ್ನ ಸತ್ಯ. ಇದರ ಬಗ್ಗೆ ಚಿಂತಿಸಲು ತೊಡಗಿದಾಗ ನನ್ನ ಅರಿವಿಗೆ ಬಂದ ಅಂಶ.

ಬರೆದುದೆಲ್ಲಾ ಸಾಹಿತ್ಯವಾಗುವುದಿಲ್ಲ ನಿಜ. ಆದರೆ ವೇದ, ಉಪನಿಷತ್ತುಗಳು ಮೌಖಿಕವಾಗಿ ಬೆಳೆದು ಬಂದರೂ, ನಂತರ ಗ್ರಂಥಸ್ಥವಾದವು. ಯಜ್ಞ, ಯಾಗಗಳು, ಹವಿಸ್ಸಿನ ಸಮರ್ಪಣೆ ಇವೆಲ್ಲಾ ದೈವಶಕ್ತಿಯಲ್ಲಿ ಪ್ರತಿಪಾದಿಸುವ ಅಂಶಗಳಾಗಿಯೇ ಇವೆ.

ರಾಮಾಯಣ, ಮಹಾಭಾರತಗಳು, ಭಗವದ್ಗೀತೆ, ಹಿಂದೂ ಧರ್ಮದ ಆಧಾರ ಸ್ತಂಭಗಳೆನಿಸಿವೆ. ಜ್ಞಾನ ಭಂಡಾರದ ಅನರ್ಘ್ಯ ರತ್ನಗಳೆನಿಸಿವೆ. ಇಲ್ಲಿಯೂ ಪ್ರತಿಪಾದಿತವಾಗಿರುವುದು ಒಂದೇ ತತ್ವ. ಅದೆಂದರೆ ಸೂತ್ರಧಾರನ ಕೈಗಳ ಬೊಂಬೆಗಳು ನಾವು. ಆಡಿಸಿದಂತೆ ಆಡುವವರು ಎಂಬುದು. ಅಂದ ಮೇಲೆ ತರ್ಕಕ್ಕೆ, ಚಿಂತನಕ್ಕೆ ಎಡೆ ಎಲ್ಲಿ?

ನಂತರದ ಸಾಹಿತ್ಯ ರಚನೆಯಲ್ಲಿ ಧರ್ಮ ಪ್ರತಿಪಾದನೆಗೆ ಪಂಪ, ರನ್ನಕ ಪೊನ್ನರಲ್ಲಿ, ವಚನ ಸಾಹಿತ್ಯದಲ್ಲಿ, ಭಾಗವತ ಸಂಪ್ರದಾಯದ ದಾಸ ಪಂಥದಲ್ಲಿ ದೊರೆತ ಪ್ರಾಮುಖ್ಯತೆ ಎಲ್ಲರಿಗೂ ತಿಳಿದಿರುವ ಅಂಶ.

ಈ ಎಲ್ಲ ಗ್ರಂಥಗಳ, ಸಾಹಿತ್ಯದ, ವ್ಯಾಸಂಗದಿಂದ ಕೇವಲ ದೈವಬಲದ ಚಿಂತನೆಯನ್ನೇ ಮಾಡಬೇಕೆ? ಅಥವಾ ಇವುಗಳ ವ್ಯಾಸಂಗದಿಂದ ತಿಳಿದ ಅಂಶಗಳನ್ನು ಜೀವನದಲ್ಲಿ ಅನುಸರಿಸಿರುವುದು ಎಷ್ಟರ ಮಟ್ಟಿಗೆ? ಅದರ ಫಲಿತಾಂಶವೇನು? ಈ ಎಲ್ಲ ಪ್ರಶ್ನೆಗಳು ನಮ್ಮ ಮುಂದೆ ನಿಂತಾಗ, ನಾವು ಈ ನಿಟ್ಟಿನಲ್ಲಿ ಅಜ್ಞಾನಿಗಳೆನಿಸುತ್ತೇವೆ. ಕಾರಣ, ಸಹಕಾರ, ಸದ್ಭಾವ, ಪರಸ್ಪರ ಗೌರವ ಮೊದಲಾದ ಮಾನವೀಯ ಗುಣ ಧರ್ಮಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಮ್ಮಲ್ಲಿರುವ ದ್ರವ್ಯವನ್ನು ಸಕಾಲದಲ್ಲಿ ಸದ್ವಿನಿಯೋಗ ಮಾಡಬೇಕೆಂಬ ಉತ್ತಮ ಮನೋಧರ್ಮದ ಬೆಳವಣಿಗೆಗಾಗಿ ಪುರಾಣ ಕಥೆಗಳ ರಚನೆಯಾಗಿವೆ.

ನಂತರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನರಲ್ಲಿ ಒಗ್ಗಟ್ಟಿನ ಬೀಜವನ್ನು ಬಿತ್ತಲು ಆಚರಣೆಗೆ ಬಂದ ಗಣೇಶೋತ್ಸವ, ದಸರಾ, ದುರ್ಗಾಪೂಜೆ ಇತ್ಯಾದಿ. ದೈವದ ಹಿನ್ನೆಲೆಯೊಳಗೊಂಡುದೇ ಆಗಿದೆ. ಇದಕ್ಕೆ ಕಾರಣ ದೇವರು, ಧರ್ಮದ ನೆಲೆಗಟ್ಟು ಭದ್ರವಾಗಿರುವುದರಿಂದ ಈ ಆಚರಣೆ ಜನರಲ್ಲಿ ಆತ್ಮೀಯತೆಯನ್ನು, ಸಹಕಾರ ಮನೋಭಾವವನ್ನು ಬೆಳೆಸುತ್ತದೆ ಎಂಬ ಉದ್ದೇಶದಿಂದ.

ಕಾಲಕ್ರಮೇಣ ಈ ಆಚರಣೆಗಳು ಜಾತೀಯತೆಯನ್ನು ಪ್ರತಿಪಾದಿಸುವ, ಹಣ ಸಂಪಾದಿಸುವ, ವ್ಯಕ್ತಿ ನಿಷ್ಠ ಆಚರಣೆಗಳೆನಿಸಿ ಸಂಸ್ಕೃತಿ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಚಟುವಟಿಕೆಗಳಾಗಿವೆ.

ಅಂದ ಮೇಲೆ ಸಂಸ್ಕೃತಿ ಎಂದರೇನು? ಇದರ ಬಗ್ಗೆ ಡಿ.ವಿ.ಜಿ.ಯವರು ಮಾತನಾಡುತ್ತಾ `ಪ್ರಕೃತಿ ಸಿದ್ಧವಾದ ಪದಾರ್ಥವನ್ನು ಮನುಷ್ಯ ವಿವೇಕದಿಂದ ಸೊಗಸುಗೊಳಿಸಿದರೆ ಅದು ಸಂಸ್ಕೃತಿ, ಬಾಳನ್ನು ಲೇಸು ಮಾಡುವುದು ಸಂಸ್ಕೃತಿ; ಲೇಸಿನೆಡೆಗೆ ಸಾಗಿಸುವುದು ಪ್ರಗತಿ. ರೂಢಿಯ ಮಾತಿನಲ್ಲಿ ಅಂತರಂಗ ಪರಿಷ್ಕರಣವೇ, ನೀತಿವಿಷಯ ಕುಶಲತೆಯೇ ಸಂಸ್ಕೃತಿ. ಹೇಳಿರುವುದು ಈ ನೆಲಗಟ್ಟಿನಲ್ಲೇ ದೈವತ್ವವನ್ನು ಕಾಣಲು ಪ್ರಯತ್ನಿಸಿರುವ ಅಂಶದ ಅರಿವನ್ನು ಮಾಡಿ ಕೊಡುತ್ತದೆ.

ಈ ಹಲವಾರು ಅಂಶಗಳ ಚಿಂತನೆಯ ನಂತರ ನಾನು ದೇವರ ಅಸ್ತಿತ್ವವನ್ನು ನಂಬುವವಳೇ? ಎಂಬ ಪ್ರಶ್ನೆ ಎದುರಾಗುತ್ತದೆ.

ಹೌದು, ನಾನು ದೈವಶಕ್ತಿಯಲ್ಲಿ ನಂಬಿಕೆ ಇಟ್ಟವಳು. ಕಾರಣ ಬಾಲ್ಯದಿಂದಲೂ ಕಠಿಣ ಅನುಭವಗಳು, ಕಷ್ಟಗಳನ್ನು ಎದುರಿಸಬೇಕಾಗಿ ಬಂದಾಗ ಹಿರಿಯರು ತೋರಿದ ಪರಿಹಾರವೆಂದರೆ ಪೂಜೆ, ದೈವದಲ್ಲಿ ನಂಬಿಕೆ. ಕೇಳಿ ತಿಳಿದ ಇಲ್ಲದೇ ಕಲಿತ ಸ್ತೋತ್ರಗಳನ್ನು ಹೇಳಿ, ದುಃಖದ ಪರಿಹಾರಕ್ಕೆ ಪ್ರಾರ್ಥಿಸಿದಾಗ ಕೆಲವು ಸಂದರ್ಭಗಳಲ್ಲಿ ನನಗೆ ಸಮಾಧಾನ ದೊರಕಿದೆ. ಕೆಲ ಸಂದರ್ಭಗಳಲ್ಲಿ ನಿರಾಸೆಯೂ ಆಗಿದೆ.

ದೈವ ಆರಾಧನೆಯ ಹೆಸರಿನಲ್ಲಿ ಮಂತ್ರ ತಂತ್ರಗಳ ಶಕ್ತಿ, ಪ್ರಾಮುಖ್ಯತೆ ಪಡೆದ ಕೆಲ ಸಂದರ್ಭಗಳಲ್ಲಿ, ನಾನು ಕೆಲವರ ಮುಂದೆ ವಾದಕ್ಕಿಳಿದುದೂ ಉಂಟು. ಅದಕ್ಕೆ ಸಮಾಧಾನಕರ ಉತ್ತರ ದೊರೆಯಲಿಲ್ಲ. ಈ ಅಂಶಗಳ ಬಗ್ಗೆ ಆಂತರಿಕ ತೊಳಲಾಟವಿದ್ದರೂ, ರೂಢಿಯಲ್ಲಿ ಬಂದಿರುವ ಪೂಜೆ, ಭಗವತ್ ಚಿಂತನಗಳಿಂದ ದೂರವಾಗಿರುವುದು ಅಸಾಧ್ಯವೆನಿಸಿದೆ. ಇದಕ್ಕೆ ನಾನು ಕೊಡುವ ಒಂದೇ ಕಾರಣವೆಂದರೆ ಮಾನಸಿಕವಾಗಿ ಕೆಲವೊಮ್ಮೆ ದೊರೆಯುವ ನೆಮ್ಮದಿ, ಅಪರೋಕ್ಷವಾಗಿ ದೊರೆಯುವ ಒಳಿತಿನ ಭರವಸೆ, ಇದು ನಗೆ ತರುವ ಮಾತಾಗಬಹುದು ಕೆಲವರಿಗೆ, ಆದರೆ ನನಗೆ ಅನ್ನಿಸಿದುದನ್ನು ನೇರವಾಗಿ ಅಭಿವ್ಯಕ್ತ ಪಡಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

— **ಗೀತ ಚಂದ್ರ ಶೇಖರ್,**
**ಡೊಂಬಿವಿಲಿ.**

## ಇದು ನಮ್ಮ ಪ್ರಾಚೀನ ಭಾರತ

(ಪುಟ 8ರಿಂದ)

ಮಿತ್ರರಿಂದ ದೂರವೂ ಇರಬೇಡ' ಅಂತ ಸುಭಾಷಿತವಿದೆಯಂತೆ!

ನಮ್ಮ ಸಂಸ್ಕೃತ ಸುಭಾಷಿತಗಳು ದುರ್ಜನರನ್ನು ಮನೋವೈಜ್ಞಾನಿಕನಿಗೂ ದಿಗಿಲಾಗುವಷ್ಟು ಅತಿ ಕಟುವಾಗಿಯೇ ಟೀಕಿಸುತ್ತವೆ. ಈಗ ನಾವು ಅಷ್ಟು ಕಟುವಾಗಿ ಪ್ರತಿಕ್ರಿಯಿಸುತ್ತಿಲ್ಲವೆನ್ನುವುದರಿಂದಲೋ ಏನೋ ದುರ್ನಡತೆಗಳು ಹುಟ್ಟಿದ್ದಿವೆ!

ಇರಲಿ. ಈಗ ನಮಗೆ ಮುದ ನೀಡುವ ಭಗವಾನ್ ಬುದ್ಧನ ಕೊನೆಯ ಮಾತು. ಆತ ತನ್ನ ಪರಿನಿರ್ವಾಣಕ್ಕೆ ತೆರಳುವ ಮುನ್ನ ಕೊನೆಯ ಬಾರಿ ವೈಶಾಲಿ ನಗರವನ್ನು ವೀಕ್ಷಿಸುತ್ತಾ ``ಚಿತ್ರಮ್ ಜಂಬೂದ್ವೀಪಮ್, ಮನೋಹರಮ್ ಜೀವಿತಮ್ ಮನುಷ್ಯಾಣಾಮ್'' (ಆಹ್! ಈ ಚಿತ್ರವಿಚಿತ್ರ ಭರತ ಖಂಡ ಇವರ ಮನೋಹರ ಭರಿತ ಜೀವನ! (ಎಷ್ಟು ಸೊಗಸು). ಅಂತ ಹೃದಯ ತುಂಬಿ ಉದ್ಗರಿಸಿದ್ದನಂತೆ!

## ರಾಮಾಯಣದ ಕೈಕೇಯಿ, ಮಂಥರೆ ಮತ್ತು ಮಹಾಭಾರತದ ಸತ್ಯವತಿ

(ಪುಟ 6ರಿಂದ)

ವೀರ್ಯ ಕೂಡ ನಿಸಂತಾನವಾಗಿ ಮಡಿದ ಸಿಂಹಾಸನ ವಾರಸುದಾರನಿದ್ದೂ ಇಲ್ಲದಂತಾಯಿತು. ಸತ್ಯವತಿ ಭೀಷ್ಮನ ಮನ ಒಲಿಸಲು ಪ್ರಯತ್ನಿಸಿ ವಿಫಲಳಾದಳು. ಎಲ್ಲ ವಿಧದಲ್ಲೂ ಸಮರ್ಥನಾದ ಭೀಷಣ ಪ್ರತಿಜ್ಞೆ ಮಾಡಿ ಭೀಷ್ಮನಾದ ದೇವವ್ರತನನ್ನೂ, ಖಾಲಿಯಾದ ಸಿಂಹಾಸನವನ್ನೂ ಕಂಡು ಸತ್ಯವತಿ ತನ್ನಿಂದಲೇ ಇಷ್ಟೆಲ್ಲಾ ನಡೆಯಿತೆಂದು ದುಃಖಿಸಿಲ್ಲವೇ? ವಿಧವೆಯರಾದ ತನ್ನ ಸೊಸೆಯರನ್ನು ಕಂಡು ಉತ್ತರಾಧಿಕಾರಿಯಿಲ್ಲದ ಅವಳೆಷ್ಟು ಮನನೊಂದಳೋ! ಧೀಮಂತನಾದ ಭೀಷ್ಮನನ್ನು ಕಂಡಾಗಲೆಲ್ಲಾ, ಈ ನೋವು ಅವಳನ್ನೂ ಬಾಧಿಸಿಲ್ಲವೇ? ಈ ದುರಂತಕ್ಕೆ ದಾಸರಾಜ, ಸತ್ಯವತಿಯರು ಕಾರಣರೇ? ಇಲ್ಲಾ, ಶಂತನು ಚಕ್ರವರ್ತಿಯೇ?

ಕೈಕೆ, ಮಂಥರೆ, ಸತ್ಯವತಿ ಇವರುಗಳೆಲ್ಲಾ ಸ್ವಾರ್ಥಿಗಳೇ? ಅಕಾರ್ಯವೆಸಗಿದ ಸ್ತ್ರೀಯರೇ? ಇಲ್ಲಾ, ಅಸಹಾಯ ಸ್ತ್ರೀಯರೇ? ಇಲ್ಲಾ, ಮಹಾರಾಜ ದಶರಥ ರಾಜ್ಯ ಶುಲ್ಕವನ್ನಾದರೂ ಕೊಡುವ ವಾಗ್ದಾನ ಮಾಡಿ ವಿವಾಹವಾಗಬೇಕಿತ್ತೇ? ಶಂತನು ಚಕ್ರವರ್ತಿ ದಶರಥರಂತಹ ರಾಜರ ಅಕಾಲ ವ್ಯಾಮೋಹದ ದುರಂತಗಳೆನ್ನದೇ ಗತ್ಯಂತರವಿಲ್ಲ.

## ಕವಿಗಳ ಕುಸುರೆಳ್ಳು

(ಪುಟ 4ರಿಂದ)

ಕಡಲೆಕಾಯಿ ಬೀಜ ಇದರಲೆಲ್ಲಾ, ಅಧಿಕಾಂಶ ಜಿಡ್ಡಿನ ಸತ್ವ ಇರೋದ್ರಿಂದ, ಈ ಮಿಶ್ರಣದ ಸೇವನೆಯಿಂದ, ಶರೀರದಲ್ಲಿ, ಜಿಡ್ಡಿನ ಅಂಶ ಕಡಿಮೆಯಾಗೋದನ್ನು ಕಡಿಬಹುದು.

ಒಟ್ಟಿನಲ್ಲಿ ಹೇಳೋದಾದ್ರೆ, ಈಗಿನ ಕಾಲದಲ್ಲಿ, ಸಾಮಾನಿನ ಬೆಲೆ ಗಗನಕ್ಕೆ ಮುಟ್ಟಿದ್ರು, ಹಬ್ಬಗಳ ಆಚರಣೆಯನ್ನು ಬಿಡ್ಲಿಸಿಲ್ಲ . . . ಮೊದಲಿನಷ್ಟು ಆಡಂಬರವಿಲ್ಲದಿದ್ರೂ, ಅಲ್ಪ ಪ್ರಮಾಣದಲ್ಲಿ ಹಬ್ಬವನ್ನು ಮಾಡಿ ಆನಂದಿಸುತ್ತಾರೆ. ಕಿಲೋ ಪ್ರಕಾರ ಮಾಡದಿದ್ರೂ, ಗ್ರಾಂನಷ್ಟಾದ್ರೂ ಮಾಡಿ, ಎಳ್ಳು ಬೆಲ್ಲವನ್ನು ಪ್ರೀತಿಯ ಬಂಧುಗಳಿಗೆ, ಸ್ನೇಹಿತರುಗಳಿಗೆ ಅದರ ಸವಿಯನ್ನುಣಿಸಿ, ತಾವು ಸವಿದು ಬಾಯಿ ಚಪ್ಪರಿಸುತ್ತಾರೆ. ಹೇಗಿದೆ ಸವಿ? ಬಲ್ಲವನೇ ಬಲ್ಲ ಎಳ್ಳು ಬೆಲ್ಲದ ಸವಿ. ಇದು ಕವಿ ವಾಣಿ. ಒಟ್ಟಿನಲ್ಲಿ ಕಣ್ಮನವನ್ನು ತಣಿಸಿ, ಬಾಯಿ ಚಪ್ಪರಿಸುವ ಹಬ್ಬ ಈ ಸಂಕ್ರಾಂತಿ. ಎಳ್ಳು ಬೆಲ್ಲದ ಮಧುರ ಮಿಲನದ ಹಬ್ಬ ಈ ಸಂಕ್ರಾಂತಿ. ಕವಿಗಳ ಕುಸುರೆಳ್ಳು ಈ ಮಕರ ಸಂಕ್ರಮಣ.

ಪ್ರಿಯ ಓದುಗರೆ.

ಸೀತಮ್ಮ ಲೇಖಿನಿಯ ಮುಖಾಂತ್ರ ಕೊಟ್ಟಿರುವ ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ.

**PREMIUM PEST CONTROL**

Save your Valuable premises and assets ! Please Contact for expert & efficient Pest Control Services at most reasonable rates. Job Undertaken even at odd hours at night, especially to suit Hotels & and Restaurants Contact:

Premium Pest Control 20, Sheetal Apartments Society, Below Vardhaman Hospital, S.P.S. Marg, Bhandup (W), Mumbai-78

Phone Office: 5689479/5618894

Pager : 9628-212509

## ಅಸೋಸಿಯೇಷನ್ನಿನಲ್ಲಿ ಕಾರ್ಯಕ್ರಮಗಳು

(ಪುಟ 2ರಿಂದ)

ಮುಂಬಯಿಯಲ್ಲಿ, Music Workshop at Londonನಲ್ಲಿ ಭಾರತೀಯ ವಿದ್ಯಾ ಭವನದ ಆಶ್ರಯದಲ್ಲಿ ಹಾಡಿದ್ದಾರೆ.

ಇವರು ಡಿ.ವಿ.ಜಿ.ಯವರ ಅಂತಃಪುರ ಗೀತೆಗಳು, ಕನಕ ದಾಸರ ಹರಿಕಥಾಮೃತಸಾರ, ಪದ್ಮರಾಗ, ರಾಘವೇಂದ್ರ ಸ್ವಾಮಿಗಳ ಮೇಲೆ ದೇವರ ನಾಮಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ಇವರು ಪ್ರಾರಂಭದಲ್ಲಿ ಹಂಸ ಧ್ವನಿ ರಾಗದಿಂದ ಪ್ರಾರಂಭಿಸಿ ಗಜವದನಾ ಮಾಂ ಪಾಹಿ ಎಂಬ ಕೃತಿಯನ್ನು ಹಾಡಿದರು. `ಖರಹರ ಪ್ರಿಯ' ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ ಪಕ್ಕಾಲ ನಿಲ ಬಡಿ ಎಂಬ ಕೀರ್ತನೆಯನ್ನು ಹಾಡಿ ಸ್ವರ ಪ್ರಸ್ತಾರ ಮಾಡಿದರು.

ಜಯಂತ ಶ್ರೀಯಲ್ಲಿ ಮರುಗೇಲರಾ (ಆದಿ ತಾಳ) ಹಾಡಿದರು. ಮೋಹನ ರಾಗವನ್ನು ಆಲಾಪನೆ ಮಾಡಿ ಗುರುಗುಹರ ಕೃತಿಯಾದ ನಾಗಲಿಂಗಂ ನಮಾಮಿ ಸತತಂ ಎಂಬ ಕೀರ್ತನೆ ಹಾಡಿ ಸ್ವರ ಪ್ರಸಾರ ಮಾಡಿದರು.

ನಾಟಕುರಂಜಿಯಲ್ಲಿ ಮನವ ನಿಲಿಸುವುದು ಬಹು ಕಷ್ಟ, ಪುರಂದರ ದಾಸರ ದೇವರ ನಾಮ, ವಸಂತದಲ್ಲಿ, ರಾಮ ರಾಮ ರಾಮ ಎನ್ನಿರೋ, ಬೃಂದಾವನಿ ಸಾರಂಗದಲ್ಲಿ ನನ್ನ ಮನವೇ ಮಂತ್ರಾಲಯ, ಯಮುನ್ ಕಲ್ಯಾಣಿಯಲ್ಲಿ ರಂಗ ಬಾರನೇ ಸಾವೇರಿಗದ ಜಗದೋದ್ಧಾರನಾ. ಹಿಂದೋಳದಲ್ಲಿ ರಾಘವೇಂದ್ರ ಗುರು ಪಾವನ ಕಾಯ ಈ ದೇವರ ನಾಮಗಳು ಶ್ರೀಯುತ ಶಂಕರ್‌ರವರ ತುಂಬು ಕಂಠದಲ್ಲಿ ಕಿವಿಗಿಂಪಾಗಿದ್ದುದೊಂದೇ ಅಲ್ಲದೆ, ಸರಳವಾದ ಹಾಗೂ ಸ್ಪಷ್ಟ ಸಾಹಿತ್ಯ ನಿರೂಪಣೆ ಎರಡೂ ಸೇರಿ ಕೇಳುವವರ ಮನ ಮುಟ್ಟುವಂತಿತ್ತು.

ಕೊನೆಯಲ್ಲಿ ಅವರು ಸಾದರ ಪಡಿಸಿದ ಹರಿಕಥಾಮೃತಸಾರದ ಮಕ್ಕಳಾಡಿಸುವಾಗ (ಕಾಪಿರಾಗ) ನೀಲಾಂಬರಿಯಲ್ಲಿ ನಿಂತರೆ ನಲಿವ ನಲಿದರೆ ಒಲಿವ ಸಿಂಧು ಭೈರವಿಯಲ್ಲಿ ನರಸಿಂಹಸ್ವಾಮಿಯ ಮೇಲಿನ ಸ್ತೋತ್ರ, ಇವುಗಳ ಹಾಡುಗಾರಿಕೆಯಲ್ಲಿ ವೈಶಿಷ್ಟ್ಯ ಪೂರ್ಣವಾಗಿ ಕಂಡು ಬಂದ ಸಾಹಿತ್ಯ ನಿರೂಪಣೆ. ಸಂಗೀತ ಸಾಹಿತ್ಯೆರಡರ ಸಮ್ಮೇಳನವಾಗಿ ಕೇಳುವವರ ಹೃನ್ಮನಗಳಿಗೆ ತಂಪನ್ನೀಯುವಂತಿತ್ತು.

ಇವರಿಗೆ ಪಕ್ಕವಾದ್ಯದಲ್ಲಿ ಪಿಟೀಲು ವಾದಕರಾಗಿ ಶ್ರೀಯುತ ಬಾಲ ಕೃಷ್ಣರವರು, ಶಂಕರ್‌ರವರಿಗೆ ಸಮನಾದ ವಾದಕರಾಗಿದ್ದರು.

ಎಲ್ಲರ ಗಮನ ಸೆಳೆದ ಎಳೆಯರಾದ ಟಿ. ವಿಜಯ ನಾರಸಿಂಹ ಹಾಗೂ ಟಿ. ಶಂಕರ್ ಇವರುಗಳು. ನಂದಕುಮಾರರ ಶಿಷ್ಯರಾಗಿದ್ದು, ತಾವೂ ಪ್ರತಿಭಾವಂತರೆಂದು ನಿರೂಪಿಸಿದರು.

— ರಮಾ ಕೃಷ್ಣ

# ಕೊನೆಯ ಹಂಬಲ

ಬದುಕಿನ ದಿನಗಳು, ಸೋಲು ಗೆಲುವಿನ ಸಂತೆ
ಹೊಡೆದಾಟ, ಬಡಿದಾಟ ಸಾವು ಬದುಕಿನ ಚಿಂತೆ
ಸಾಕು ಬೇಕೆನ್ನುವ,
ಮುಂದೆ ಹಿಂದೆನ್ನುವ
ದಿನ ದಿನದ ದಿನಚರಿಯ ಕೊನೆಯಿರದ ಕಂತೆ.
ಈಗಿರುವ ಜ್ಞಾನವು ಆಗಲೇ ಇದ್ದರೆ?
ದಾರಿಯ ಕಷ್ಟ ಸುಖ ಮೊದಲೇ ಗೊತ್ತಿದ್ದರೆ?
ಏನು ಮಾಡುತ್ತಿದ್ದೆವೊ ಆಗ ಎಂಬ
ಯೋಚನೆಯು ಬಂದರೆ?
ಬೇರೆ ದಾರಿಯ ಪಯಣ ಹೇಗಿರುವುದೊ,
ಎಂದರೆ?
ಜೀವನದ ದಿನಗಳು ಒಂದೊಂದಾಗಿ ಕಳೆ ಕಳೆದು
ಈಗ ಕಾಣುತಲಿದೆ ಬದುಕಿನ ಸಂಜೆ
ಮಾಡಿದರೂ ಒಂದೇ, ಮಾಡದಿದ್ದರೂ ಒಂದೇ?
ಎಂಬ ಭಾವವು ಬರುತಿದೆ ಮನದ ಮುಂದೆ.
ಉತ್ತರವು ಬೇಕಿಲ್ಲ, ಅದು ನಿಮಗೆ ಗೊತ್ತು.
ಪಯಣದ ಕೊನೆಯಲ್ಲಿ ಹೆಣವ ಹೊತ್ತು
ಯಾವ ದಾರಿಯಾದರೂ ಸರಿ ನಡೆಯೆ ನೀನು.
ಬಂದು ಸೇರುವೆ ಅಲ್ಲಿ ನಿನ್ನೊಡನೆ ನಾನು.
ಕಾಣುತಿದೆ ದೂರದಲಿ ಮಸಕಾದ ಉರಿ ಕಿಚ್ಚು
ಪಯಣದಾ ಕೊನೆಯ ಬರಿಯ ಹುಚ್ಚು
ಮರಣದ ಹೆದರಿಕೆ ಮಾಯವಾಗಿದೆ ಈಗ
ಬಾಗಿಲಿನ ಆಕಡೆ ನೋಡುವ ಹಂಬಲ ಹೆಚ್ಚು.

**- ಅಜ್ಞಾತ.**

# ಕವನಗಳು

## ಮನಸ್ಸು

ನಾ ಮುಂದೆ
ತಾ ಮುಂದೆನುತ
ಕುಣಿದು ಕುಪ್ಪಳಿಸುತ
ದಡ ಸೇರಿಯೊ
ಸೇರದೆಯೊ
ತಟಸ್ಥವಾಗಿ ಅಲ್ಲಲ್ಲೆ
ಹುಟ್ಟು ಕಳೆಗೊಳ್ಳುವ
ಅಬಾಲ ಅಲೆ
ನನ್ನ ಮನಸ್ಸು

## ಟೀವಿ, ಹೆಂಡತಿ ಮತ್ತು ನಾಯಿಮರಿ

ನನ್ನ ಮನೆಗೆ ಬಣ್ಣದ
ಕನಸು ಹೊತ್ತು
ಮೊದಲು ಬಂದವಳು ಮನೆ ಹೆಂಡ್ತಿ -
ಅಂದ್ರೆ ಹೌಸ್ ವೈಫು
ಮತ್ತೆ ಅನಿವಾರ್ಯವಾಯ್ತು
ಬಣ್ಣದ ಟೀವಿ.
ಕಪ್ಪು ಬಿಳುಪಿರಲಿ ಟೀವಿ
ಈಸ್ಟ್‌ಮನ್ ಕಲರಿರಲಿ
ಕಾರ್ಯಕ್ರಮಗಳು ಮಾತ್ರ
ಲಂಚ್‌ಹೋಮಿನ ಮೀನು
ಸಾರಿನಂತೆ ಹಳಸು ಹಳಸು ಸಪ್ಪೆ ಸಪ್ಪೆ.
ಮನೆ - ಮನದೊಳಗೆಲ್ಲ
ಹೆಚ್ಚಾದಂತೆ ರಗಳೆ ರಾಮಾಯಣ
ಬಣ್ಣದ ಹೆಂಡತಿಯ ಬಿನ್ನಾಣ
ಕಪ್ಪು ಬಿಳುಪಾಯಿತು ಕ್ರಮೇಣ
ಅಂಟಿಕೊಂಡೇ ಇದ್ದರೆ ಇವೆರಡಕೆ
ಬಹುಕಷ್ಟ ನೋಡಿ
ಒಂದರ ಪಿರಿಪಿರಿ ಬಂದ್ ಆಯಿತೊ
ಇನ್ನೊಂದರ ಕಿರಿಕಿರಿ ಆರಂಭ
ಒಂದು 'ಐ' ವಾಷರ್
ಇನ್ನೊಂದು ಬ್ರೈನ್ ವಾಷರ್
ಅತಿಯಾದರೆ ದೂರದರ್ಶನ ಬಿಡಿ
ಸಮೀಪದರ್ಶನವೂ ಬೋರು.

-೨-

ನನ್ನಾಕೆಗೆ ಸ್ವಲ್ಪ ತಾಳ್ಮೆ ಕಡಿಮೆ
ಮದುವೆಯಾಗಿ ವರ್ಷ ಮೂರೆ ಆದರೂ
ಮಡಿಲು ತುಂಬಲಿಲ್ಲವೆಂದು ನೊಂದು
ಟೈಮ್ ಪಾಸ್‌ಗೆ ತಂದಳೊಂದು
ಅಗ್ಗದ ದೇಶೀ ನಾಯಿ ಮರಿ.
ಅದೀಗ ಆಕೆಗೆ ತುಂಬಾ ಡೀಯರ್
ಬಂದಂದಿನಿಂದಿ ಆ ಬೇವಕೂಫ್ ಡೀಯರ್
ನಾವಿಬ್ಬರು ತುಂಬಾ ಡಿಫರ್
ನಮ್ಮೊಳಗೆ ಸರಸ ಸಲ್ಲಾಪ
ಮುಂಬಯಿಯಲ್ಲಿನ ಮಳೆಯಂತೆ
ಈಗೀಗ ತೀರಾ ಅಪರೂಪ.
ವಿರೋಧ ಪಕ್ಷದ ಡಿಮಾಂಡನ್ನು
ಆಳುವ ಪಕ್ಷ ಅಲಕ್ಷಿಸುವಂತೆ
ನನ್ನ ಕನಿಷ್ಠ ಬೇಡಿಕೆಗಳೂ
ಈಗೀಗ ಈಡೇರುತ್ತಿಲ್ಲ.
ನನಗೇ ಆಶ್ಚರ್ಯ ಆಗ-
ಕಾಲೇಜಿನ ಸಭೆ-ಸ್ಪರ್ಧೆಗಳಲ್ಲಿ
ಅಟಲ ಬಿಹಾರಿಯಂತೆ ಗುಡುಗುತ್ತಿದ್ದವ
ಈಗ -
ಕರ್ನಾಟಕದ ಸಪ್ಪೆ ಎಂಪಿಗಳಂತೆ
ಹೇಗೆ ಬದಲಾದೆನೆಂದು.

## ನನ್ನ ಕವಿತೆಗಳು

ನನ್ನ ಕವಿತೆಗಳು
ನೀರಿನಲಿ ತೇಲುತ್ತವೆ
ಗಾಳಿಯಲಿ ಹಾರಾಡುತ್ತವೆ
ಮಾತ್ರ ಪ್ರತಿಮೆ ಬಂಧಮುಕ್ತ
ವಿಮರ್ಶಕರಿಂದ ಮಾರುದ್ದ ಸರಿಯುತ್ತವೆ.
ನನ್ನ ಕವಿತೆಗಳು
ನನ್ನದೇ ತದ್ರೂಪ
ಹೈಟಿಲ್ಲ ವೈಟಿಲ್ಲ
ಹಲಕ ಫುಲಕ ಥೇಟು
ಧರೆಗಿಳಿದ
ರುಪಾಯಿ ರೇಟು.

**● ಗೋಪಾಲ ತ್ರಾಸಿ**

# ಗರತಿ - ಜಾನಪದದ ಮೂಲ ಸೆಲೆ

● ಸುಮಾ ದ್ವಾರಕಾನಾಥ್.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ ।
ಎಳ್ಳು ಜೀರಿಗೆ ಬೆಳೆಯೋಳ । ಭೂಮಿತಾಯಿ ।
ಎದ್ದೊಂದು ಗಳಿಗೆ ನೆನೆದೇವ ॥

ಜನಪದ ಕವಿ - ಅನೇಕ ಪ್ರಸಂಗಗಳಲ್ಲಿ, ಹೆಣ್ಣು ಮಗಳು ಈ ಭೂಪ್ರಜ್ಞೆ ಇರುವಂತಹವರು ಲೋಕದಲ್ಲಿ ವಿರಳ. ಮಾನವನ ಬದುಕಿಗೆ ಭೂಮಿಯೇ ಸರ್ವಸ್ವ. ತನ್ನೆಲ್ಲ ಸುಖ ಸಂಪತ್ತುಗಳಿಗೆ ಕಾರಣವಾದ ಭೂತಾಯಿಯನ್ನು ಮರೆತರೆ ಕ್ರೂರ ಪಾಪವೊದಗುತ್ತದೆಂಬ ನಂಬಿಕೆ ಇದೆ.

ಜಾನಪದ ಅಭಿವ್ಯಕ್ತಿಗೊಳ್ಳುವ ಎರಡು ಮುಖ್ಯ ಮಾಧ್ಯಮಗಳೆಂದರೆ `ಮಾತು' ಮತ್ತು `ಕೃತಿ'. ಜೀವನ ಸಮಸ್ತವನ್ನು ವಸ್ತುವಾಗುಳ್ಳ, ಬಹು ವಿಸ್ತಾರವಾದ ಸಾಹಿತ್ಯದ ವಿಂಗಡಣೆ ಕಠಿಣ. ಮಾನವ ಜೀವನದ ಸಕಲ ಮುಖಗಳೂ ಇಲ್ಲಿ ಪ್ರತಿಫಲಿಸಿವೆ. ನಿಜಕ್ಕೂ ಇದು ಇತಿಹಾಸ ಪೂರ್ವ ಯುಗದ ಹಾಗೂ ಸಾರ್ವಕಾಲಿಕ ಸಾಮಾನ್ಯರ ವೇದ ಮಾತ್ರವಲ್ಲ, ವಿಶ್ವ ಕೋಶವಾಗಿದೆ. ಇಲ್ಲಿ ಸಂಸಾರದ ಎಲ್ಲ ಮುಖಗಳನ್ನೂ ಕಾಣಬಹುದು.

ಬಹುತೇಕ ಗರತಿಯ ಹಾಡುಗಳೆಲ್ಲ ಕ್ರಿಯಾತ್ಮಕವಾದುವು. ಕ್ರಿಯೆ ಮತ್ತು ಗೀತೆಗಳೆರಡೂ ಪರಸ್ಪರ ಪೂರಕ ಮತ್ತು ಪ್ರೇರಕಗಳೆನ್ನಬಹುದು. ಹಳ್ಳಿಗರ ಆಸರು ಬೇಸರುಗಳಿಗೆ ಇವು ಹಿರಿ ಮದ್ದು. ಅವುಗಳನ್ನು ಹಾಡಿ ಕೊಂಡಾಗ ತೀರ್ಥ ಸ್ನಾನದ ಫಲ ಅವರಿಗಾಗುತ್ತದೆ.

ಪ್ರಾಮಾಣಿಕತೆ ಎಲ್ಲ ಗರತಿಯರ ಹಾಡುಗಳ ಪ್ರಧಾನ ಲಕ್ಷಣ. ಭಾವಾತಿರೇಕದಲ್ಲಿ ಕಾಪಟ್ಯವಿಲ್ಲ. ಅವರ ಹೃದಯದ ಭಾವತರಂಗವೇ ಕಾವ್ಯದ ಹೊನಲಾಗಿ ಹರಿಯುತ್ತದೆ.

ಒಂದು ರೀತಿಯಲ್ಲಿ ಇವು ಆಶು ಕವಿತೆ. ಯಾವುದೋ ಒಂದು ಕ್ಷಣದಲ್ಲಿ ಆನಂದ ತುಂಬಿ ತುಳುಕಿದಾಗ, ನೋವು ಮನಸ್ಸನ್ನೆಲ್ಲಾ ಹಿಂಡಿದಾಗ, ಗಾನ ಲಹರಿ ಹರಿಯುತ್ತದೆ. ಇದು ಸಾಮುದಾಯಿಕ ಸೃಷ್ಟಿಯ ಮೂಲಕ ಸಮಾಜದ, ಜನಾಂಗದ ಅಥವಾ ಜಗತ್ತಿನ ಆಸ್ತಿಯಾಗುತ್ತದೆ.

ಈ ಕಾವ್ಯದ ಶೈಲಿ ಅತ್ಯಂತ ಸರಳ, ಅಕೃತಕವಾದುದು. ಈ ಸಾಹಿತ್ಯದ ಒಂದು ಮುಖ್ಯ ಗುಣವೆಂದರೆ ವಿಶ್ವ ಮೌಲಿಕತೆ. ಅದು ಅನೇಕ ಕಾಲದ ಬಹು ಜನರ ಅನುಭವ ರಸಾಯನವಾದ್ದರಿಂದ ಅದಕ್ಕೆ ಚಿರಂಜೀವಿತನ ಲಭಿಸಿದೆ.

ಕಾಯಕದ ಮಹತ್ವ ಕಂಡು ಕೊಂಡು ಬದುಕಿನಲ್ಲಿ ಕ್ರಿಯಾಂತರಗೊಳಿಸಿಕೊಂಡು ದುಡಿಮೆಯೇ ದೈವವೆಂದು ಹಗಲಿರುಳೂ ಶರೀರವನ್ನು ತೇಯ್ದ ಕರ್ಮಯೋಗಿನಿ (ಗರತಿ) ಆಕೆ. ಮನೆಯಲ್ಲಿ ಹೊತ್ತಿಗೆ ಮುಂಚೆ ಏಳುವವಳು ಅವಳು. ಕಸ ಗುಡಿಸಿ, ನೀರು ನಿಡಿ ತಂದು, ಮುಸುರೆ ತಿಕ್ಕಿ, ಮಗುವಿಗೆ ಹಾಲೂಡಿಸಿ, ಹಿರಿಯರನ್ನುಪಚರಿಸಿ ಹೊಲಕ್ಕೆ ಹೋಗಬೇಕು. ಅಲ್ಲಿಂದ ಬಂದು ಅಡುಗೆ ಬೇಯಿಸಬೇಕು. ಮತ್ತೆ ಹೊಲದ ಕೆಲಸ ರಾತ್ರಿ ಎಲ್ಲರಿಗಿಂತ ಕೊನೆಯಲ್ಲಿ ಮಲಗುವವಳು ಅವಳೇ. ಒಟ್ಟಿನಲ್ಲಿ ಅವಳು ಭೂಮಾತೆಯ ನಂತರ ಸಮಾಜಕ್ಕೆ ಎರಡನೆಯ ತಾಯಿ.

ಹಳ್ಳಿಯ ಹೆಣ್ಣಿನ ಪಾಲಿಗೆ ಬೀಸುವ ಕಲ್ಲು - ಜಡ ವಸ್ತುವಲ್ಲ. ಅವಳು ಕಲ್ಲಮ್ಮ ಮಾತಾಯಿ. ಬೈಗುಜನರ ಪ್ರಕಾರ ಕೆಳಗಣ ಕಲ್ಲು ತಾಯಿ, ಮೇಲಣ ಕಲ್ಲು ತಂದೆ. ಮೊದಲು ದಾಗಿ ಬೀಸಿದವಳು ಸಿರಿ ಗೌರಿ. ಹಾಡು ಕಲಿಸಿದವಳು ಕೃಷ್ಣನ ತಂಗಿ ಸುಭದ್ರೆ. ಬೆಳಗಿನ ಜಾವ ಕಲ್ಲಿನ ಶ್ರುತಿಯೊಂದಿಗೆ ಹಾಡು ಮನೆ ಮಂದಿಗೆಲ್ಲಿ ಸಮ್ಮೋಹನಾಸ್ತ್ರ.

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ಜೋಳವ ।
ಮೆಲ್ಲ ಮೆಲ್ಲನೆ ಉದುರಪ್ಪ । ನಾ ನಿನಗೆ
ಬೆಲ್ಲದಾರುತಿಯ ಬೆಳಗೇನು ॥

ಭೂತಾಯಿಯನ್ನೂ ನೆನೆದ ಮೇಲೆ ಜನ್ಮದಾತರಾದ ತಂದೆ ತಾಯಿಗಳನ್ನು ನೆನೆಯುವುದು ಆದ್ಯ ಕರ್ತವ್ಯ.

ಉಂಗುರ ಉಡಿದಾರ ಮುರದ್ರೆ ಮಾಡಿಸಬಹುದು ।
ಮಡದಿ ಸತ್ತರ ತರಬಹುದು । ಹಡೆದಂಥ
ತಂದಿ ತಾಯೆಲ್ಲಿ ಸಿಕ್ಕಾರ ॥

**ಮಾತೃ ವಾತ್ಸಲ್ಯ:** ಎಳೆತನದಲ್ಲಿ, ತಾರುಣ್ಯದಲ್ಲಿ, ವೃದ್ಧಾಪ್ಯದಲ್ಲಿ, ಯಾವ ಕಾಲದಲ್ಲೂ ಅವಳಿಗೆ ಸ್ಫೂರ್ತಿಯಾಗಿ ದಾರಿ ದೀಪವಾಗಿ ಬರುವ ತಾಯಿಯನ್ನು ಅರಿತು ಹೀಗೆ ಹೇಳುತ್ತಾಳೆ.

"ಯಾರ ಇದ್ದರ ನನ್ನ ತಾಯವ್ವನ್ಹೋತಾರ
ಸಾವಿರ ಕೊಳ್ಳಿ ಒಲೆಯಾಗ । ಉರಿದರ
ಜ್ಯೋತಿ ನಿನ್ನಾರ ಹೋತಾರ ॥

ತಬ್ಬಾಸಗಿದಿವಸಕೆ ಬೇವಿನ ಮರ ತಂಪ ।
ಭೀಮರಥಿಯೆಂಬ ಹೊಳಿತಂಪ । ಹಡೆದವ್ವ
ನೀ ತಂಪವನನ್ನ ತವರಿಗೆ ॥

ತವರಿನ ತಂಪನ್ನು ಗಂಡನ ಮನೆಯಲ್ಲಿ ಹೀಗೆ ನೆನೆಯುತ್ತಾಳೆ. ತಂದೆ ತಾಯಿ ಹೇಳುವ ಬುದ್ಧಿ ಮಾತು (ಗಂಡನ ಮನೆಗೆ ಹೋಗುವಾಗ) ಮನದಲ್ಲಿ ಆರ್ದತೆ ಹುಟ್ಟಿಸುತ್ತದೆ.

"ಆಲಕೆ ಹೂವಿಲ್ಲ ಸಾಲಿಕೆ ಕೊನೆಯಿಲ್ಲ ।
ಜಾಲೀಯಾ ಮರವು ನೆರಳಲ್ಲ । ಹೆಣ್ಣಿಗೆ
ತಾಯಿಯ ಮನೆಯು ಸ್ಥಿರವಲ್ಲ."

ಎಂದು ಹೇಳಿ,

ಅತ್ತೆ ಮಾವರಿಗಂಜ ಸುತ್ತಲು ನೆರೆಗಂಜಿ ।
ಮತ್ತೆ ಆಳುವ ಧೊರೆಗಂಜಿ । ಮಗಳೆ
ಅತ್ತೆಯ ಮನೆಯನ್ನು ಒಡಿಬ್ಯಾಡ ॥

ಎನ್ನುವ ಸೂಕ್ಷ್ಮ ಜೀವನದ ದಾರಿಯನ್ನು ತೋರಿಸುತ್ತಾರೆ. ಗಂಡನ ಮನೆಯೇ, ತನ್ನದೆಂದಾಗ ಗರತಿ ತವರಿನ ಹೆಚ್ಚಳದೊಂದಿಗೆ ತನ್ನ ಸಂಸಾರದ ಹಿರಿಮೆಯನ್ನು ಹೀಗೆ ಹೇಳಿಕೊಳ್ಳುತ್ತಾಳೆ.

ತಾಯಿದ್ರೆ ತವರ್ಹೆಚ್ಚು ತಂದಿದ್ರೆ ಬಳಗ್ಹೆಚ್ಚು
ಸಾವಿರಕೆ ಹೆಚ್ಚು ಪತಿ ಪುರುಷ ।
ಹೊಟ್ಟೆಯ ಹರಳು ಮಾಣಿಕದ ಮಗ ಹೆಚ್ಚು ॥

ತಾಯಿ ಮಗಳನ್ನು ಕಳಿಸಿ ತನ್ನ ಕರುಳಿನ ಒಡತನ್ನಿಂದ ದೂರವಾದಾಗ, ಹೀಗೆ ಬಿಸು ಸುಯ್ಯುತ್ತಾಳೆ.

ಹೆಣ್ಣು ಹಡೆಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ।
ಹೆಣ್ಣು ಹೋಗಾಗ ಅಳಬ್ಯಾಡ ।
ಸಿಟ್ಟಾಗಿ ಶಿವನ ಬೈಬ್ಯಾಡ ॥

ಮುಂದಿನ ಜೀವನದಲ್ಲಿ, ಮಗುವೇ ಕೇಂದ್ರವಾಗುತ್ತದೆ. ತನ್ನ ಕೂಸಿನ ವರ್ಣನೆ ಹೀಗೆ ಸಾಗುತ್ತದೆ.

ಅಳುವ ಕಂದನ ತುಟಿಯು ಹವಳದ ಒಡಿಯಂಗ
ಕುಡಿ ಹುಬ್ಬು ಬೇವಿನೆಸಳಾಂಗ । ಒಗ್ಗೋಟ
ಶಿವನ ಕೈಯ್ಯಲಗು ಹೊಳೆದ್ಹಾಂಗ ॥

ಹೆಣ್ಣಿನ ಜೀವನ ವ್ಯರ್ಥ ಎನ್ನುವ ಭಾವನೆ ಅವಳಿಗೆ ಒಮ್ಮೊಮ್ಮೆ ಬರುವುದುಂಟು. ಆ ಸಮಯದಲ್ಲಿ ಹೀಗೆ ಹಾಡಿದ್ದಾಳೆ.

ಹೆಣ್ಣು ಆಗುಕಿಂತ, ಮಣ್ಣು ಆಗೋದು ಲೇಸು
ಮಣ್ಣಿನ ಮ್ಯಾಲ ಮರವಾಗಿ । ಇದ್ದರ

ಬಂದವರಿಗೆಲ್ಲ ನೆರಳವ್ವ ॥

ಒಬ್ಬಂಟಿಯಾಗುವ ನೋವು, ಮಾತೃತ್ವದ ಹಂಬಲ, ವೈಯಕ್ತಿಕವಾದ ಅನಾಥ ಪ್ರಜ್ಞೆಯಲ್ಲಿ ಪರಿಣಮಿಸುವಂಥದು. ಆದರೆ ಬಂಜೆತನವನ್ನು ಕುರಿತ ಕೆಲವು ಪದ್ಯಗಳನ್ನು ನೋಡಿದರೆ, ಇದೂ ಕೂಡ ಒಂದು ಸಾಮಾಜಿಕ ಅಪೇಕ್ಷೆಯ ಪರಿಣಾಮವಾಗಿರುವುದನ್ನು ಕಾಣಬಹುದು.

ಕಂದನ ಕೊಡು ಶಿವನೆ, ಬಂಧನ ಬಿಡಲಾರೆ
ಹಂಗೀನ ಬಾನಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ ॥

ಕಂದನಿಲ್ಲದ್ದಕ್ಕಾಗಿ ಹೆಣ್ಣು ಪಡಬೇಕಾದ ಬಂಧನಕ್ಕೆ ಕಾರಣ, ಸಮಾಜ, ಬಂಜೆಯರನ್ನು ಅನಾದರದಿಂದ ಕಾಣುವುದೇ ಆಗಿದೆ. ಇಂಥ ಸಾಮಾಜಿಕ ಅಪೇಕ್ಷೆಗಳ ಅತ್ಯಾಚಾರಗಳೇ ಕೆಟ್ಟ ಕನಸಾಗಿ ಕಾಡುತ್ತದೆ.

ಹಾಗೆಯೇ ಮಗು ಬದುಕದಿದ್ದರೂ ಅಷ್ಟೇ ಹೋಯಿತು. ಹುಟ್ಟಿ ಆಗಲೇ ಸತ್ತರೂ ಚಿಂತೆಯಿಲ್ಲ. ಬಂಜೆ ಎಂಬ ಶಬ್ದ ಅಳಿಸಿದರೆ ಸಾಕು ಎನಿಸುತ್ತದೆ.

ಸಂಜೆ ಕೊಟ್ಟು ನೀಮುಂಜಾನೆಕೊಳ್ಳಯ್ಯ
ಬಂಜೆಂಬ ಶಬುದ ಮರೆಸಯ್ಯ

ಎಂದು ಹೆಣ್ಣು ಮೊರೆಯಿಡುತ್ತಾಳೆ.

ಗರತಿಯ ಜೀವನ ಹೆಜ್ಜೆ ಹೆಜ್ಜೆಗೂ ದುಃಖ, ನೋವು ಸಂಕಟಗಳ ಬಿರುಗಾಳಿ. ಇಂತಹ ಸಂದರ್ಭದಲ್ಲಿ ಜೀವನದಿಂದ ಮುಕ್ತಳಾಗಲು ಬಯಸುತ್ತಾಳೆ. ಅವಳಿಗೆ ಮರಣವೇ ಮಹಾನವಮಿ. ಮುತ್ತೈದೆ ಸಾವಿನ ಮಹಾರಾಣಿಯಾಗ ಬಯಸುತ್ತಾಳೆ. ಸಾವಿನಲ್ಲಿ ತನ್ನನ್ನು ಎಲ್ಲರೂ ಹೊಗಳುವಂತಾಗ ಬೇಕೆಂದೂ, ತನ್ನ ಅಂತ್ಯ ಯಾತ್ರೆಗೆ ಜನರು ಕಿಕ್ಕಿರಿದು ಬರುವಂತಾಗಬೇಕೆಂದು ಅವಳ ಹಿರಿಯಾಸೆ.

ಲೋಕದಾಗಿರುತನಕ ಚೆಲಾಗಿ ಇರಬೇಕ
ಸಾಕಾಗಿ ಶಿವನ ಸದಂಗಿ । ಹೋಗಾಗ
ಎಲ್ಲಾರು ಬರತಾರ ಕಳಿಸಾಕ ॥

ಇಹಲೋಕದ ಯಾತ್ರೆ ಮುಗಿಯಿತು, ನಡೆಯನ್ನು ಎಂದು ಕರೆಯುವ ಕರಾಳ ಯಮರಾಯನನ್ನೂ ಇವಳು ಅತಿಥಿಯಂತೆ ಸತ್ಕರಿಸಿ ಬಾಳಿನ ಆಸೆಯನ್ನು, ಶಾಂತಿ ಸಮಾಧಾನಗಳಿಂದ ಎದುರಿಸಿದ ಧೀರೆ ಈಕೆ.

ಎಂದೂ ಬಾರದ ನೀವು ಇಂದೇಕೆ ಬಂದಿರಿ?
ಕೊಳ್ಳಯ್ಯ ನೀರ ಕುಡಿ ನೀರ । ಜವರಾಯ
ಕೊಳ್ಳಯ್ಯ ನೀರ ಕುಡಿ ನೀರ ॥

**ಜೀವನ ಮೌಲ್ಯ:** ಕೆಲವೊಂದು ಸಲ ಧನದ ಮದ, ಅಧಿಕಾರ ಮದ, ಯೌವನ ಮದ, ಸ್ವಾರ್ಥ, ಜೀವನದ ಹಿರಿಮೆಯನ್ನು ಕಠಕು ಮಾಡಿ ಬಿಡುವುವು. ಇಂಥ ವಿಷ ಗಳಿಗೆಯನ್ನು ಎದುರಿಸಲು ಗಂಡು ಹೆಣ್ಣು ಮದಹರರಾಗಿ ನಿಂತು ಬಾಳನ್ನು ತಿದ್ದಲು ಹೇಗೆ ಹೆಣಗಾಡಿದ್ದಾರೆ ಎನ್ನುವುದೂ ಹೃದಯಂಗಮವಾಗಿ ಹಾಡ ಹರಕೆಯಾಗಿದೆ.

ಮಗುವಿನ ಮುಗ್ಧವೂ, ಪರಿಶುದ್ಧವೂ ಆದ ಎದೆಯಾಳದಲ್ಲಿ, ಗರತಿ ಈ ನೀತಿಯ ನುಡಿಗಳನ್ನು ಮೂಡಿಸುತ್ತಿದ್ದಾಳೆ.

ಆಚಾರಕ್ಕರ ಸಾಗು ನೀತಿಗೆ ಪ್ರಭುವಾಗು ।
ಮಾತಿನಲ್ಲಿ ಚೂಡಾಮಣಿಯಾಗು । ಕಂದಯ್ಯ
ಜ್ಯೋತಿಯೇ ಆಗು ಜಗಕೆಲ್ಲ ॥

ಕೊಡುವುದು ಜೀವನದ ಸಹಜ ರೀತಿಯಾದರೆ ಕೊಟ್ಟದ್ದನ್ನು ನೆನೆಯದೆ ಇರುವುದು ಗಾನದ ಸಹಜ ನೀತಿ.

ಕೊಟ್ಟು ಕುದಿಯಲು ಬೇಡ ಇಟ್ಟು ಹಂಗಿಸಬೇಡ
ಇಷ್ಟುಂಡರೆಂದು ಅನ ಬ್ಯಾಡ । ಈ ಮೂರು
ಮುಟ್ಯಾವ ಶಿವನ ಅದರಿಸೆ ॥

ಹೀಗೆ ನೀಡುವ ಕಾರ್ಯದಲ್ಲಡಗಿರುವ ಮರ್ಮವನ್ನು ಜನಪದ ನುಡಿ ತೋರಿಸಿದೆ.

ಧನ ಲೋಭ, ಸ್ವಾರ್ಥ ಬುದ್ಧಿ ಮನುಷ್ಯನನ್ನು ಕಂಗೆಡಿಸುವಂತೆ ಹರೆಯವೂ ಅವನ ದೇಹದಲ್ಲಿ ಕಾಲಿರಿಸಿ ಮದವೇರಿಸುವುದುಂಟು. ಪ್ರಾಯದ ಮಬ್ಬಿನಲ್ಲಿರುವ ತರುಣ-ತರುಣಿಯರಿಗೆ ಗರತಿಯ ಸಂದೇಶ.

ಹೆಣ್ಣಿಂದ ರಾವಣ ಮಣ್ಣು ಗೂಡಿದನಯ್ಯ ।
ಅನ್ನಿಗರ ಹೆಣ್ಣು ಬಯಸದೆ । ಕಂದಯ್ಯ
ನಿನ್ನ ಹೆಣ್ಣೊಡನೆ ಸುಖಿಯಾಗು ॥

ಸುಳ್ಳು, ಕಳವು ಮಾಡದಿರುವಂತೆ ತನ್ನ ತಮ್ಮನು ಇನ್ನೊಬ್ಬರ ಹೆಣ್ಣನ್ನು ಹೊರಳಿಯೂ ನೋಡಬಾರದೆಂದು ಗರತಿ ಹೇಳುತ್ತಾಳೆ.

ಸುಳ್ಳು ಹೇಳಲಿ ಬೇಡ । ಕಳುವು ಮಾಡಲಿ ಬೇಡ।
ಒಳ್ಳೆಯ ಹಾದಿ ಬಿಡಬೇಡ । ನನ ತಮ್ಮ
ಹೊಳ್ಳಿ ನೋಡ ಬೇಡ ಪರ ಹೆಣ್ಣ ॥

ಹೀಗೆ ಇನ್ನೂ ಹಲವಾರು ಬಗೆಯಲ್ಲಿ ಹರಿದು ನಾಡಿನ ಜನರ ಎದೆಯ ಕೊಳೆಯನ್ನು ತೊಳೆದು ಹಸನು ಗೊಳಿಸಿದ್ದಾಳೆ.

ಮಂದಿ ಮಕ್ಕಳಾಗ ಚೆಂದಾಗಿ ಇರುಬೇಕು ।
ನಂದೀಯ ಶಿವನ ದಯದಿಂದ । ಹೋಗಾಗ
ಮಂದಿ ಬಾಯಾಗ ಇರಬೇಕ ॥

**ವೈಚಾರಿಕತೆ :** ಈ ಜನ ಹೆಚ್ಚಾಗಿ ಪ್ರವೃತ್ತಿ ಮಟ್ಟದಲ್ಲಿ ಬದುಕಿದವರು. ಜೀವನದ ಎಲ್ಲ ಸಮಸ್ಯೆಗಳಿಗೂ ಕರ್ಮ ಮೊದಲಾದ ಎಲ್ಲವನ್ನೂ ಒಳಗೊಳ್ಳುವ ಸಿದ್ಧ ಉತ್ತರಗಳಿಂದಲೇ ತೃಪ್ತರಾದವರು. ಜನಪದದ ನಂಬಿಕೆಯಲ್ಲಿ ಲಭ್ಯವಿರುವ ದ್ರವ್ಯ ಮತ್ತು ಉಪಕರಣಗಳಿಂದಲೇ ಕವಿ ಈ ವಿಚಾರವನ್ನು ಪ್ರಕಟಿಸಿದ್ದಾನೆ.

ನಿರಾಕಾರದಾಗ ನೀರಿನ ಹೊರತಾ
ಇದ್ದಿದ್ದಿಲ್ಲ ಏನಾ ।
ಹೇ! ನೀರು ಅಂದರ ನೀರಿನ ರೂಪಾ
ತೊಟ್ಟಿದ್ದ ಭಗವಾನಾ ॥

ದೇವರ ನಿರಾಕಾರತ್ವಕ್ಕೆ ಆಕಾರ ಕೊಡುವ ಪ್ರಯತ್ನವೇ ಇಲ್ಲಿ ಮಹತ್ವದ್ದಾಗಿದೆ.

ಮೌಲ್ಯ ಪ್ರಜ್ಞೆ: ಜನಪದ ಕವಿಗಳು ತಮ್ಮ ಸಾಮಾಜಿಕ ವ್ಯವಸ್ಥೆಗೆ ಒಪ್ಪಿತವಾದ ಮೌಲ್ಯಗಳನ್ನು ತಾವೂ ಒಪ್ಪಿ ಕೊಂಡರು. ವ್ಯಕ್ತಿಗಳ ಸುಖಕ್ಕೆ ಮೌಲ್ಯಗಳು ಇದ್ದಿಯಾದಾಗ ಪ್ರತಿಭಟನೆಯ ಧ್ವನಿಗಳು ಕೇಳಿ ಬರುವುದು ಸಾಮಾನ್ಯ ಸಂಗತಿ. ಆದರೆ ಇಲ್ಲಿ ಅಂಥ ಬಂಡಾಯದ ಧ್ವನಿ ಕೇಳಿ ಬರುವುದೇ ಇಲ್ಲ. ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳಿರಬಹುದೆಂದು ತೋರುತ್ತದೆ.

ಮೊದಲನೆಯದು ಭಾರತೀಯ ಕರ್ಮ ತತ್ವ.

ಎರಡನೆಯದು ಮೌಲ್ಯಗಳು ಈ ಜನರ ಪಾಲಿಗೆ ತೀರ ಸರಳಗೊಳಿಸಿದ ನೀತಿಗಳಾಗಿದ್ದವು.

ಮೂರನೆಯ ಕಾರಣ ಜನಪದ ಕವಿ ಬದುಕಿದ ಸಮಾಜ ಸಮಷ್ಟಿ ಪ್ರಜ್ಞೆ ಹೆಚ್ಚು ಜೀವಂತವಾಗಿದ್ದ ಸಮಾಜ. ಅಂದರೆ ಮೌಲ್ಯ ವಿವೇಚನೆಯ ದೃಷ್ಟಿಕೋನ ವ್ಯಕ್ತಿಯತ್ತ ಅಲ್ಲ ಸಮಾಜದತ್ತ ಅಭಿಮುಖವಾಗಿರುವುದನ್ನು ಪ್ರಸಿದ್ಧ ಕವನ ``ಕೆರೆಗೆ ಹಾರ''ದಲ್ಲಿ ಕಾಣಬಹುದು.

ಕಲ್ಲಿನ ಕೇರಿಮಲ್ಲನ ಸೌದಾ ಕೆರೆಯೊಂದು ಕಟ್ಟಿಸ್ಯಾನು
ಕೆರೆಯೊಂದ ಕಟ್ಟಿಸ್ಯಾನು ಸೆರೆಯುಕ್ಕ ನೀರಿಲ್ಲ
ಸೆರೆಮುಕ್ಕೀ ನೀರಿಲ್ಲ ಹೊತ್ತಿಗ್ಗಿ ತೆಗಿಸ್ಯಾರು
ಹೊತ್ತಿಗ್ಗಿ ತಗಸ್ಯಾರು ಜೋಯಿಸ ಕೇಳ್ಯಾರು
``ದೇವರಲ್ಲ ದಿಂಡ್ರಲ್ಲ ದೆವ್ವಲ್ಲ ಭೂತಲ್ಲ

(ಪುಟ 16ಕ್ಕೆ)

# ಸಂಮೋಹಿನಿ ಚಿಕಿತ್ಸೆ - 12

● ಡಾ| ಉಷಾರಾವ್

**ಪೀಠಿಕೆ:**

ಯೋಗದ ಬಗ್ಗೆ ಮನಶ್ಶಾಸ್ತ್ರೀಯ ಪ್ರಸ್ತಾಪಗಳಲ್ಲಿ ಸಂಮೋಹಿನಿ ವಿಷಯದಲ್ಲಿ ವ್ಯಾಪಕವಾಗಿರುವಂಥ ನಿಗೂಢತೆಯನ್ನೇ ಕಾಣಬಹುದು. ಪಾಶ್ಚಾತ್ಯ ಸಂಮೋಹಿನಿ ತಜ್ಞರು ಯೋಗದ ಬಗ್ಗೆ ನಿಜವಾದ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸದೆಯೇ ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತಾರೆ.

ಯೋಗ ತತ್ವಶಾಸ್ತ್ರದ ಒಂದು ವಿಭಾಗ. ಅದನ್ನು ಪತಂಜಲಿ ಮಹರ್ಷಿ ಕ್ರಿ.ಶ. 300 ಮತ್ತು 500ರ ನಡುವಣ ಅವಧಿಯಲ್ಲಿ ಬರೆದಿದ್ದು, ಈ ವ್ಯವಸ್ಥೆಯಲ್ಲಿ ನಾಲ್ಕು ಹಂತಗಳು ಅಥವಾ ವಿಭಾಗಗಳಿವೆ. ಅವು:

ಸಮಾಧಿ (ಚಿತ್ತೈಕಾಗ್ರತೆ)

ಸಾಧನಾ (ಚಿತ್ತೈಕಾಗ್ರತೆಯನ್ನು ಸಾಧಿಸುವ ದಾರಿ)

ವಿಭೂತಿ (ಚಿತ್ತೈಕಾಗ್ರತೆಯಿಂದ ಲಭಿಸುವ ಪ್ರಕೃತ್ಯತೀತ ಶಕ್ತಿಗಳು)

ಕೈವಲ್ಯ (ಉದಾರ ಪ್ರಜ್ಞೆ)

ಈ ಇಡೀ ವ್ಯವಸ್ಥೆ 195 ಸೂತ್ರಗಳನ್ನೊಳಗೊಂಡಿದ್ದು ಸರಳವಾದ ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ.

ಭಾವೋದ್ರೇಕ, ಅಸೂಯೆ, ದಯೆ ಮುಂತಾದ ಚಿತ್ತ ವೃತ್ತಿಗಳನ್ನು ಹತೋಟಿಯಲ್ಲಿರುವಂಥ ಸ್ಥಿತಿ ಎಂದು ಯೋಗವನ್ನು ವರ್ಣಿಸಲಾಗಿದೆ.

ಮನಸ್ಸು ಐದು ಸ್ಥಿತಿಗಳನ್ನು ಹೊಂದಿರುವುದು.

1. ಕ್ಷಿಪ್ತ - ಓಲಾಡುವ ಸ್ಥಿತಿ
2. ಮೂಢಾ - ಕರ್ತವ್ಯ ಮತ್ತು ಅಕರ್ತವ್ಯಗಳ ನಡುವೆ ವ್ಯತ್ಯಾಸ ತಿಳಿಯದ ಸ್ಥಿತಿ
3. ವಿಕ್ಷಿಪ್ತ - ತಾತ್ಕಾಲಿಕ ಚಿತ್ತೈಕಾಗ್ರತೆಯ ಸ್ಥಿತಿ
4. ಏಕಾಗ್ರ - ಏಕಚಿತ್ತ ಮತ್ತು
5. ನಿರುದ್ಧ - ಪ್ರತಿಬಂಧಕ ಸ್ಥಿತಿ.

ಮೇಲ್ಕಂಡ ಐದು ಸ್ಥಿತಿಗಳಲ್ಲಿ ಕಡೆಯ ಎರಡು ಸ್ಥಿತಿಗಳು ಯೋಗಕ್ಕೆ ಸಹಾಯಕ, ಮೊದಲ ಮೂರು ಸ್ಥಿತಿಗಳು ಅಸಹಾಯಕ. ಮೊದಲನೆಯ, ಅಂದರೆ ಕ್ಷಿಪ್ತ ಸ್ಥಿತಿಯಲ್ಲಿ ಮನಸ್ಸಿನ ಗಮನ ಡೋಲಾಯಮಾನವಾಗಿರುತ್ತದೆ. ಹಾಗೂ ಚಡಪಡಿಕೆಯನ್ನು ವ್ಯಕ್ತಪಡಿಸುತ್ತದೆ. ಎರಡನೆ ಸ್ಥಿತಿಯಲ್ಲಿ (ಮೂಢಾ) ಮನಸ್ಸು ಭಾವೋದ್ರೇಕ ಅಥವಾ ಮಂದತೆಯಿಂದ ಆಕ್ರಮಿತವಾಗಿರುತ್ತದೆ. ಒಳ್ಳೆಯ ಮತ್ತು ಕೆಟ್ಟದರ ನಡುವೆ ವ್ಯತ್ಯಾಸ ತಿಳಿಯುವುದಿಲ್ಲ. ಮೂರನೆಯ ಸ್ಥಿತಿ (ವಿಕ್ಷಿಪ್ತ) ಮೊದಲನೆಯ ಸ್ಥಿತಿಗೆ ಸದೃಶವಾದುದು. ಆದರೆ ಗಮನ ಕೇಂದ್ರೀಕರಣದ ವ್ಯಾಪಕತೆಯಲ್ಲಿ ವ್ಯತ್ಯಾಸವಿರುತ್ತದೆ. ಇಲ್ಲಿ ಮನಸ್ಸು ಡೋಲಾಯಮಾನವಾಗುವುದನ್ನು ತಾತ್ಕಾಲಿಕವಾಗಿ ತಡೆಯಬಹುದು. ನಾಲ್ಕನೆಯ ಸ್ಥಿತಿಯಲ್ಲಿ (ಏಕಾಗ್ರ) ಬಾಹ್ಯ ಅಥವಾ ಆಂತರಿಕ ಸಹಾಯದ ಮೂಲದ ಚಿತ್ತೈಕಾಗ್ರತೆಯನ್ನು ಸಾಧಿಸಬಹುದು. ಆದರೆ ಕಡೆಯ ಸ್ಥಿತಿಯಲ್ಲಿ (ನಿರುದ್ಧ) ಚಿತ್ತೈಕಾಗ್ರತೆ ಸಾಧಿಸಲು ಬಾಹ್ಯ ಅಥವಾ ಆಂತರಿಕ ಸಹಾಯ ಅಗತ್ಯವಿಲ್ಲ. ಆದುದರಿಂದ ಇದು ಏಕಾಗ್ರಕ್ಕಿಂತ ಉತ್ತಮವಾದ ಸ್ಥಿತಿ.

ಯೋಗದ ಲಕ್ಷಣ:

ಪತಂಜಲಿಯ ಪ್ರಕಾರ, ಯೋಗ ಅಂದರೆ ಮನಸ್ಸಿನ ಕಾರ್ಯನಿರ್ವಹಣೆಗಳ ಮೇಲೆ ಸಂಪೂರ್ಣ ಹತೋಟಿ ಸಾಧಿಸುವುದು. ಯೋಗವು ಮನೋವೈಜ್ಞಾನಿಕ ಚಿಕಿತ್ಸೆಯಲ್ಲಿನ ವ್ಯಕ್ತಿತ್ವ ದೋಷ ಮೊದಲಿಗೆ ಹೆಚ್ಚು ಕಡಿಮೆ ಸದೃಶವಾದುದು; ಮತ್ತು ಯೋಗದಲ್ಲಿನ ಧಾರಣ ಮತ್ತು ಧ್ಯಾನದ ಅವಧಿಯಲ್ಲಿ ಮನಸ್ಸು ಇರುವ ಸ್ಥಿತಿ ಧ್ಯಾನ (ಮೆಡಿಟೇಷನ್)ಕ್ಕೆ ಸದೃಶವಾದುದು. ಮುಂದೆ, ಚಿತ್ತವೃತ್ತಿ (ಮಾನಸಿಕ ಪ್ರವೃತ್ತಿಗಳು), ಬಾಹ್ಯ ಗುರಿಗಳು ಮತ್ತು ಸಂವೇದನಾ ಇಂದ್ರಿಯಗಳ ನಡುವಣ ಪರಸ್ಪರ ಕ್ರಿಯೆಗಳ ಫಲಿತಗಳು. ಇವುಗಳನ್ನು ನೋವು ಉಂಟು ಮಾಡುವ ಮತ್ತು ನೋವು ಉಂಟು ಮಾಡದ ಎಂದು ವರ್ಗೀಕರಿಸಲಾಗಿದೆ.

ಮಾನಸಿಕ ಪ್ರವೃತ್ತಿಗಳ (ಚಿತ್ತವೃತ್ತಿ) ಐದು ಮೂಲಗಳು ಕೆಳಕಂಡಂತಿವೆ:

1. ರುಜುವಾತಾದ ಜ್ಞಾನ.
2. ಸುಳ್ಳು ಜ್ಞಾನ.
3. ಕಾಲ್ಪನಿಕ ಜ್ಞಾನ.
4. ನಿದ್ರೆ ಮತ್ತು
5. ಜ್ಞಾಪಕ ಶಕ್ತಿ.

ನೋವು ಉಂಟು ಮಾಡುವ ಮಾನಸಿಕ ಪ್ರವೃತ್ತಿಗಳಲ್ಲಿ ಮುಖ್ಯವಾದುವು:

1. ಪ್ರೀತಿ
2. ಅಸೂಯೆ
3. ಭಾವೋದ್ರೇಕ ಮತ್ತು
4. ಕೋಪ.

ಈ ಮೇಲ್ಕಂಡವು ವ್ಯಥೆಯ ಮೂಲಗಳು.

ಪ್ರೀತಿ ಪುರಸ್ಸರ ಗುಣಗ್ರಹಣ, ಅರ್ಪಣೆ, ಅನಾಸಕ್ತಿ, ಸ್ನೇಹ ಮತ್ತು ದಯೆ ಇವುಗಳು ವ್ಯಥೆಯನ್ನು ನಿವಾರಿಸುವುವು ಮತ್ತು ಬಂಧಗಳಿಂದ ಅಂತಿಮ ಮುಕ್ತಿಗೆ ಸಹಾಯ. ಯೋಗದ ಸಮಯದಲ್ಲಿ ವ್ಯಕ್ತಿ ಯಾತನಾಮಯ, ಯಾತನಾರಹಿತ ಪ್ರವೃತ್ತಿಗಳೆಲ್ಲವುಗಳಿಂದ ಮುಕ್ತವಾದ ಸ್ಥಿತಿಯನ್ನು ತಲುಪುವನು. ಈ ಪ್ರವೃತ್ತಿಗಳನ್ನು ಅವುಗಳ ಐದು ಮೂಲಗಳಲ್ಲೇ ತಡೆಗಟ್ಟುವ ಮೂಲಕ ಇದನ್ನು ಸುಲಭವಾಗಿ ಸಾಧಿಸಬಹುದು, ಹೀಗೆ ಒಂದು ಬಗೆಯ ನಿರ್ಲಿಪ್ತ ಸ್ಥಿತಿಯನ್ನು ಸೃಷ್ಟಿಸಬಹುದು. ಈ ಸ್ಥಿತಿಯಲ್ಲಿ ಮನಸ್ಸು ಬಾಹ್ಯ ವಿಷಯಗಳಿಂದ ಹಿಂದೆ ಸರಿದು ಅಂತರ್ಮುಖಿಯಾಗುವುದು.

ನಿರ್ಲಿಪ್ತ ಸ್ಥಿತಿಯನ್ನು ತಲುಪುವ ಪ್ರಕ್ರಿಯೆಯಲ್ಲಿ ಐದು ಹಂತಗಳಿರುವುವು. ಈ ಎಲ್ಲಕ್ಕೂ ನಿರಂತರ ಅಭ್ಯಾಸ ಅಗತ್ಯ. ಮೊದಲನೆಯ ಹಂತದಲ್ಲಿ ವ್ಯಕ್ತಿ ಗುರಿಗಳು ಮತ್ತು ಅಪೇಕ್ಷೆಗಳಲ್ಲಿ ಅನಾಸಕ್ತನಾಗಲು ಪ್ರಯತ್ನಿಸುತ್ತಾನೆ. ಇದರ ಹಿಂದೆಯೇ ಉಳಿದಿರಬಹುದಾದ ಯಾವುದೇ ಭಾವೋದ್ರೇಕ ಅಥವಾ ಆಸಕ್ತಿಯ ಬಗ್ಗೆ ಸಕ್ರಿಯ ಅನ್ವೇಷಣೆ ಮತ್ತು ತಿರಸ್ಕಾರದ ಪ್ರಕ್ರಿಯೆ ನಡೆಯುತ್ತದೆ. ಮೂರನೆಯ ಹಂತದಲ್ಲಿ, ಭಾವೋದ್ರೇಕಗಳನ್ನು ಅದು ಮಿತವಾಗಿದ್ದರೂ ಅವುಗಳ ಸೂಕ್ಷ್ಮ ಮೂಲಗಳು ಅಥವಾ ಚಿಹ್ನೆಗಳು ಆಗಾಗ್ಗೆ ಕಾಣಿಸಿಕೊಳ್ಳಬಹುದು. ಅವುಗಳನ್ನು ನಿಗ್ರಹಿಸಬೇಕು. ಅಂತಿಮ ಹಂತದಲ್ಲಿ ಈ ಚಿಹ್ನೆಗಳೂ ಸುಪ್ತಮೂಲಗಳು ಅಸ್ತಿತ್ವ ಕಳೆದುಕೊಂಡಿರುವುವು. ಮಾನಸಿಕ ಪ್ರವೃತ್ತಿಗಳನ್ನು ತಡೆಗಟ್ಟಿ ನಿರ್ಲಿಪ್ತತೆಯನ್ನು ಸಾಧಿಸಿದ ನಂತರ ವ್ಯಕ್ತಿ ಸಮಾಧಿ ಸ್ಥಿತಿಗೆ ಸಿದ್ಧವಾಗಿರುವನು.

ಸಮಾಧಿಯಲ್ಲಿ ಎರಡು ಬಗೆಗಳಿವೆ - ಜಾಗೃತ ಪ್ರಜ್ಞೆಮತ್ತು ಪ್ರಜ್ಞಾಹೀನ ಸ್ಥಿತಿ. ಮೊದಲನೆಯದರಲ್ಲಿ, ವ್ಯಕ್ತಿಯೊಬ್ಬ ಮೊದಲು ಒಟ್ಟು ಗುರಿಗಳತ್ತ ಮತ್ತು ಅನಂತರ ಇವುಗಳಿಗೆ ಕಾರಣವಾದ ಸೂಕ್ಷ್ಮ ಅಂಶಗಳ ಬಗ್ಗೆ ಗಮನ ಕೇಂದ್ರೀಕರಿಸುವ ಮೂಲ ಸಮಾಧಿ ಸ್ಥಿತಿಯನ್ನು ತಲುಪಬಹುದು. ಈ ಸ್ಥಿತಿಯನ್ನು ತಲುಪಲು ಪ್ರಯತ್ನಿಸುವ ಹೊಸಬರು, ಒಟ್ಟು ಗುರಿಗಳತ್ತ ಗಮನ ಕೇಂದ್ರೀಕರಿಸಲಾರಂಭಿಸಿ, ಸತತ ಅಭ್ಯಾಸದ ನಂತರ ಎಂಥ ಗುರಿಯನ್ನೂ ಸಾಧಿಸಬಲ್ಲ ಬಿಲ್ಲುಗಾರನಂತೆ. ಸಮಾಧಿಗೆ ಮುಖ್ಯವಾದ ಅಂಶಗಳು ಐದು. ``ಧಾತುಗಳು'' - ಭೂಮಿ, ನೀರು, ವಾಯು, ಅಗ್ನಿ ಮತ್ತು ಆಕಾಶ. ಚಿತ್ತೈಕಾಗ್ರತೆಗೆ ಮುಖ್ಯವಾದ ಅಂಶಗಳಲ್ಲಿ ಸಂವೇದನಾ ಇಂದ್ರಿಯಗಳೂ ಸೇರಿವೆ.

ಸಮಾಧಿ ಸ್ಥಿತಿಗೆ ಶತ್ರುಗಳಾದ ಕೆಲವು ದೈಹಿಕ ಹಾಗೂ ಮನಶ್ಶಾಸ್ತ್ರೀಯ ಅಂಶಗಳು ಕೆಳಕಂಡಂತಿವೆ:

1. ಕಾಹಿಲೆ
2. ಮಾನಸಿಕ ಶಕ್ತಿ
3. ಹಿಂಜರಿಕೆ ಮತ್ತು ಸಂಶಯ
4. ತಾತ್ಸಾರ, ಮತ್ತು
5. ಸೋಮಾರಿತನ.

ಇವುಗಳಲ್ಲದೆ, ಒಬ್ಬ ವ್ಯಕ್ತಿ ಅಸುಖಿ, ಹತಾಶ ಹಾಗೂ ಮನಸ್ಸು ಕ್ಷುಬ್ಧ ಆಗಿದ್ದರೆ ಆತ/ಆಕೆ ಚಿತ್ತಜಾಗ್ರತೆ ಸಾಧಿಸಲು ಸಾಧ್ಯವಾಗುವುದಿಲ್ಲ. ಸಂತೋಷ, ವ್ಯಥೆ, ಸದ್ಗುಣ, ಮತ್ತು ದುರ್ಗುಣಗಳಿಂದ ಮಾನಸಿಕ ಕ್ಷೋಭೆ ಸಾಮಾನ್ಯವಾಗಿ ಉಂಟಾಗುತ್ತಾರೆ. ಒಬ್ಬ ವ್ಯಕ್ತಿಯಲ್ಲಿ ಇವುಗಳಿಲ್ಲವಾದರೂ ಬೇರೆಯವರಲ್ಲಿದೆಯೆಂಬ ಭಾವನೆಯಿಂದಾಗಿ ಆತನ/ಆಕೆಯ ಮನಸ್ಸು ವಿಚಲಿತವಾಗಬಹುದು. ಇನ್ನೊಬ್ಬರ ಸುಖ ಈ ವ್ಯಕ್ತಿಯಲ್ಲಿ ಅಸೂಯೆಯನ್ನು ಕೆರಳಿಸಬಹುದು. ಆದರೆ ಸುಖೀ ವ್ಯಕ್ತಿಯ ಬಗೆಗೆ ಸ್ನೇಹಪರ ಧೋರಣೆಯನ್ನು ಬೆಳೆಸಿಕೊಳ್ಳುವ ಮೂಲಕ ಇದನ್ನು ನಿವಾರಿಸಬಹುದು. ದುಃಖದಲ್ಲಿರುವ ವ್ಯಕ್ತಿಯ ಬಗೆಗೆ ಅನುಕಂಪ ಆಕ್ರಮಣಕಾರೀ ಪ್ರವೃತ್ತಿಗಳನ್ನು ನಿವಾರಿಸುವುದು. ಇನ್ನೊಬ್ಬರಲ್ಲಿನ ಸದ್ಗುಣ ಸಂತೋಷವನ್ನು ತರಬಲ್ಲುದು. ಆಗ ಅಸೂಯೆ ನಿವಾರಣೆಯಾಗುತ್ತದೆ. ಆದೇ ದುರ್ಗುಣ ಔದಾಸೀನ್ಯ ಉಂಟು ಮಾಡಬಹುದು. ಈ ವಿಧಾನದಿಂದ ಮನಸ್ಸು ಶುದ್ಧವಾಗುವುದು ಮತ್ತು ಚಿತ್ತಜಾಗ್ರತೆ ಸುಲಭವಾಗುವುದು.

ಪರಿಶುದ್ಧ ಆತ್ಮಸಾಕ್ಷಿಯೊಂದಿಗೆ ಮನಸ್ಸು ಯಾವುದೇ ಸಂವೇದನಾ ಇಂದ್ರಿಯದ ಮೇಲೆ ಗಮನ ಕೇಂದ್ರೀಕರಿಸಬಲ್ಲುದು ಮತ್ತು ನಿರ್ದಿಷ್ಟ ಸಂವೇದನೆಯನ್ನು ನವಿರಾದ ರೀತಿಯಲ್ಲಿ ಅನುಭವಿಸಬಲ್ಲುದು.

ಯೋಗದಲ್ಲಿ ತುರೀಯ ಹಂತವನ್ನು ತಲುಪಲು ಎಂಟು ಸಹಾಯಕ ಮಾರ್ಗಗಳಿವೆ. ಅವುಗಳನ್ನು ಕೆಳಗೆ ಕೊಡಲಾಗಿದೆ.

| | | |
|---|---|---|
| ಯಮ | - | ವಿಮುಖತೆ |
| ನಿಯಮ | - | ವೀಕ್ಷಣೆ |
| ಆಸನ | - | ಶರೀರದ ಭಂಗಿ |
| ಪ್ರಾಣಾಯಾಮ | - | ಉಸಿರಾಟದ ನಿಯಂತ್ರಣ |
| ಪ್ರತ್ಯಾಹಾರ | - | ಸಂವೇದನಗಳ ಹಿಂತೆಗೆತ |
| ಧಾರಣ | - | ದೃಢಗಮನ |
| ಧ್ಯಾನ | - | ಅವಲೋಕನ |
| ಸಮಾಧಿ | - | ವಶ್ಯಸುಪ್ತಸ್ಥಿತಿ |

ಈ ಎಲ್ಲ ಸಹಾಯಕ ಮಾರ್ಗಗಳೂ ಸಹಿತ ಅಭ್ಯಾಸದಿಂದ ಮಾತ್ರ ಪರಿಪೂರ್ಣತೆ ಗಳಿಸುವುವು. ಇದರಿಂದ ವ್ಯಕ್ತಿ ತಾನು ಗಮನ ಕೇಂದ್ರೀಕರಿಸಬೇಕಾಗಿರುವ ಗುರಿಯತ್ತ ತಲ್ಲೀನವಾಗಲು ಸಹಾಯವಾಗುವುದು. ತನ್ನ ವ್ಯಕ್ತಿತ್ವದ ಬಗೆಗೂ ಆತನಿಗೆ/ ಆಕೆಗೆ ಪ್ರಜ್ಞೆ ಇರುವುದಿಲ್ಲ. ಅಂದರೆ ಆ ವ್ಯಕ್ತಿಗೆ ತನ್ನ ಚಿತ್ತಜಾಗ್ರತೆಯ ಬಗೆಗೂ ಪ್ರಜ್ಞೆ ಇರುವುದಿಲ್ಲ. ಇದನ್ನೇ ಸಮಾಧಿ ಸ್ಥಿತಿ ಎಂದು ವರ್ಣಿಸಲಾಗಿದೆ.

ಯೋಗ ಹಾಗೂ ಸಂಮೋಹಿನಿ ನಡುವೆ ತುಲನೆ:

ಯೋಗದ ಸಮಾಧಿ ಸ್ಥಿತಿ ಹಾಗೂ ಅದನ್ನು ತಲುಪುವ ವಿಧಾನ ಬಹುತೇಕವಾಗಿ ಸಂಮೋಹಿನಿಯ ವಶ್ಯಸುಪ್ತಿ ಅಂಶಕ್ಕೆ ಹೋಲಿಸಬಹುದಾದಂಥದು. ವಾಸ್ತವವಾಗಿ, ಸಮಾಧಿ ಸ್ಥಿತಿಯ ಉದ್ದೇಶ ಸ್ವಯಂ ವಾಸ್ತವತೆಯನ್ನು ಗ್ರಹಿಸಬಲ್ಲ ಸ್ಥಿತಿ. ಒಬ್ಬ ವ್ಯಕ್ತಿಯ ಮನಸ್ಸನ್ನು ಶುದ್ಧೀಕರಿಸುವ ಮೂಲಕ ಸಾಧಿಸಬಹುದು. ಆದರೆ ವ್ಯಕ್ತಿ ಸಂಪೂರ್ಣ ಸ್ವಯಂ-ನಿಯಂತ್ರಣದ ಅಪರೂಪದ ಗುಣಗಳನ್ನು ಕಾರ್ಯಪ್ರವೃತ್ತಗೊಳಿಸಿದ ಹೊರತು ಇದನ್ನು ಸುಲಭವಾಗಿ ಸಾಧಿಸಲಾಗುವುದಿಲ್ಲ. ಇದಕ್ಕೆ ಪ್ರತಿಯಾಗಿ, ವ್ಯಕ್ತಿ ಸರಿಯಾಗಿ ಸಹಕರಿಸಿದರೆ ಕೆಲವೇ ಅಭ್ಯಾಸ ಅವಧಿಗಳಲ್ಲಿ ಅತ್ಯಂತ ಗಾಢವಾದ ಸಂಮೋಹಿನಿ ಸ್ಥಿತಿಯನ್ನು ಸಾಧಿಸಬಹುದು. ನೈತಿಕತೆ ಹಾಗೂ ಸ್ವಯಂ-ನಿಯಂತ್ರಣ ಸಂಮೋಹಿನಿಗೆ ಅಸಂಗತ. ವಶ್ಯ ಸುಪ್ತಿ ಸ್ಥಿತಿಯಲ್ಲಿ ವ್ಯಕ್ತಿ ಅಂತರ್ದೃಷ್ಟಿ ಜ್ಞಾನವನ್ನು ಪಡೆಯುವುದಿಲ್ಲ. ಅಥವಾ ಉತ್ತಮ ವ್ಯಕ್ತಿಯಾಗುವುದಿಲ್ಲ. ಆದರೆ ಸಮಾಧಿ ಸ್ಥಿತಿಯಲ್ಲಿ ಇವೆಲ್ಲ ಸಾಧ್ಯ. ತನ್ನಷ್ಟಕ್ಕೇ ಬಿಟ್ಟಲ್ಲಿ ಸಂಮೋಹಿನಿಗೊಳಪಟ್ಟ ವ್ಯಕ್ತಿ ನಿದ್ರೆಗೆ ಒಳಗಾಗುತ್ತಾನೆ; ಆದರೆ ಸಮಾಧಿ ಸ್ಥಿತಿಯಲ್ಲಿ ಯೋಗಿಯನ್ನು ಆತನಷ್ಟಕ್ಕೇ ಬಿಡುವುದು ಅಗತ್ಯ. ಒಬ್ಬ ಬೋಧಕನ ನಿರ್ದೇಶನದ ಮೇಲೆ ಸಮಾಧಿ ಸ್ಥಿತಿ ತಲುಪಲು ಸಾಧ್ಯವಾಗುವುದಿಲ್ಲ. ಆದರೆ ಮೊದಲಬಾರಿ ಸಂಮೋಹಿನಿ ಸ್ಥಿತಿ ಅಥವಾ ವಶ್ಯಸುಪ್ತಿ ಸ್ಥಿತಿ ತಲುಪಲು ಹಿಪ್ನಾಟಿಸ್ಟ್ ಒಬ್ಬರ ಸಹಾಯ ಬಹಳ ಅಗತ್ಯ. ಇಲ್ಲವಾದಲ್ಲಿ, ಕೆಲವು ವಿಷಯಗಳಲ್ಲಿ ಸಂಮೋಹಿನಿ ಹಾಗೂ ಸಮಾಧಿ ಪರಸ್ಪರ ಹೋಲುತ್ತವೆ. ಸಂಮೋಹಿನಿ ಮತ್ತು ಸಮಾಧಿ ಸ್ಥಿತಿ ನಡುವೆ ಕಾರ್ಯನಿರ್ವಹಣೆಯಲ್ಲಿ ಒಂದು ಮುಖ್ಯ ಸಾದೃಶ್ಯವೆಂದರೆ ಪೃಥಕ್ಕರಣ (ಡಿಸ್ಸೋಸಿಯೇಷನ್). ಸಂಮೋಹಿನಿಗೆ ಒಳಪಟ್ಟ ವ್ಯಕ್ತಿ ಸಮಯ ಹಾಗೂ ಸ್ಥಳದಿಂದ ಸರಿಯಾಗಿ ನಿರ್ದೇಶಿತವಾಗಿಲ್ಲದಿರಬಹುದು. ಉಷ್ಣಾಂಶದಲ್ಲಿನ ಸಾಧಾರಣ ಬದಲಾವಣೆಗಳ ಬಗೆಗೆ, ಆ ವಿಷಯವಾಗಿ ಸ್ಪಷ್ಟ ನಿರ್ದೇಶನ ನೀಡಿದ ಹೊರತು, ವ್ಯಕ್ತಿ ಚಿಂತಿಸುವುದಿಲ್ಲ. ಆದರೆ ಕೆಲವು ವ್ಯತ್ಯಾಸಗಳಿರುವುವು. ಸಂಮೋಹಿನಿಗೊಳಗಾಗಿರುವ ವ್ಯಕ್ತಿ ಸಾಮಾನ್ಯವಾಗಿ ಸಾಮಾಜಿಕ ಹಾಗೂ ನೈತಿಕ ಮಟ್ಟಗಳಿಂದ ಖಂಡಿತ ವಿಮುಖನಾಗಿರುವುದಿಲ್ಲ. ಹಿಪ್ನಾಟಿಕ್ ಸೂಚನೆಯು ವ್ಯಕ್ತಿಗೆ ಬೆದರಿಕೆ ಉಂಟು ಮಾಡುವಂಥಾದರೆ ಆತ/ಆಕೆ ಎಚ್ಚರಗೊಳ್ಳುವರು. ಇದು ಅಪೂರ್ಣ ಪೃಥಕರಣವನ್ನು ಸೂಚಿಸುವುದು. ಸಮಾಧಿ ಸ್ಥಿತಿಯಲ್ಲಿ ಒಬ್ಬ ವ್ಯಕ್ತಿ ತನ್ನ ದೈಹಿಕ ಹಾಗೂ ಮಾನಸಿಕ ವಾತಾವರಣದಿಂದ ಸಂಪೂರ್ಣವಾಗಿ ಸಂಬಂಧ ಕಡಿದುಕೊಳ್ಳಬಲ್ಲ.

ವಶ್ಯಸುಪ್ತಿ ಸ್ಥಿತಿಯಲ್ಲಿನ ಘಟನೆಗಳ ಬಗೆಗೆ, ಜ್ಞಾಪಕಶಕ್ತಿ ಹರಣದ ಅರ್ಥದಲ್ಲಿ, ಗಾಢವಾದ ವಶ್ಯಸುಪ್ತಸ್ಥಿತಿಯಲ್ಲಿ ಪೃಥಕ್ಕರಣ ವ್ಯಕ್ತವಾಗಬಹುದು. ಆದರೆ, ಮರೆವು ರೋಗ ಸೂಚಿತವಾಗಿಲ್ಲದಿದ್ದಲ್ಲಿ, ಜ್ಞಾಪಕಶಕ್ತಿ ಹರಣ ಕೇವಲ ಭಾಗಶವಷ್ಟೆ. ಇದಕ್ಕೆ ಪ್ರತಿಯಾಗಿ, ಸಮಾಧಿ ಸ್ಥಿತಿಯಲ್ಲಿ, ಯೋಗಿಗೆ ತಾನು ಅನುಭವಿಸಿದ ಸಂತೋಷ ಹಾಗೂ ಆನಂದದ ಸ್ಪಷ್ಟ ನೆನಪು ಇರುವುದು ಎಂದು ಹೇಳಲಾಗಿದೆ. ಸಂಮೋಹಿನಿಯಲ್ಲಿ ಹೀಗಿಲ್ಲ. ಆದರೆ ಗಾಢ ವಶ್ಯಸುಪ್ತಿ ಅನುಭವಿಸಿದ ವ್ಯಕ್ತಿಗಳು ಅದು ಬಹಳ ಹಿತವಾಗಿತ್ತೆಂದು ಹೇಳುತ್ತಾರೆ ಮತ್ತು (ಸುಪ್ತ ಸ್ಥಿತಿಯಲ್ಲಿ ನಿರ್ದಿಷ್ಟ ಅಹಿತಕರ ಅಥವಾ ಅಂಗೀಕಾರಾರ್ಹವಲ್ಲದ ಸೂಚನೆಗಳನ್ನು ನೀಡಿಲ್ಲದಿದ್ದಲ್ಲಿ) ಆ ಅನುಭವಗಳನ್ನು ಮತ್ತೆ ಪಡೆಯಬೇಕೆಂದು ಅಪೇಕ್ಷಿಸುತ್ತಾರೆ. ಗಾಢವಾದ ಸಮಾಧಿ ಸ್ಥಿತಿಯಲ್ಲಿ, ಮರೆಯುವಂಥ ಯಾವುದೇ ಘಟನೆಗಳಿಲ್ಲದಿರುವ ಸಾಧ್ಯತೆಯಿಂದ. ಏಕೆಂದರೆ ಅದು ಚಿತ್ತಜಾಗ್ರತೆಯ ಸ್ಥಿತಿ. ಆದುದರಿಂದ ಯೋಗಿ ಅನುಭವಿಸುವುದು ಸಾಮಾನ್ಯವಾಗಿ ಸುಖದ ಭಾವನೆ.

ಸಮಾಧಿ ಮತ್ತು ಸಂಮೋಹಿನಿ ಸ್ಥಿತಿಗಳನ್ನು ಸಾಧಿಸುವ ವಿಧಾನಗಳಲ್ಲಿ ಕೆಲವು ಸಾದೃಶ್ಯಗಳಿರುವಂತೆ ತೋರುತ್ತದೆ. ಶರೀರದ ಭಂಗಿಗಳು (ಆಸನ) ಮತ್ತು ಉಸಿರಾಟದ ನಿಯಂತ್ರಣ (ಪ್ರಾಣಾಯಾಮ) ಸಮಾಧಿ ಸ್ಥಿತಿ ತಲುಪಲು ಎರಡು ಪರೋಕ್ಷ ಸಹಾಯಕಗಳು: ಯೋಗಿಗಳು ಸಾಮಾನ್ಯವಾಗಿ ಅನೇಕ ಆಸನಗಳನ್ನು ಅಭ್ಯಸಿಸುತ್ತಾರೆ; ಆದರೆ ಚಿತ್ತಜಾಗ್ರತೆಯ ಸಮಯದಲ್ಲಿ ಒಂದೇ ಒಂದು ಆಸನವನ್ನು ಆಯ್ಕೆ ಮಾಡಲಾಗುವುದು. ಕನಿಷ್ಠ ಶಾರೀರಕ ಚಲನೆ ಮತ್ತು ಗರಿಷ್ಠ ವಿಶ್ರಾಂತಿ ಇದರ ಮುಖ್ಯ ಉದ್ದೇಶ. ಸಂಮೋಹಿನಿ ಟ್ರಾನ್ಸ್ ಸ್ಥಿತಿ ಉಂಟು ಮಾಡುವಲ್ಲಿ ಅನೇಕ ವೇಳೆ ದೀರ್ಘ ಶ್ವಾಸೋಚ್ಛ್ವಾಸವನ್ನು ಶಿಫಾರಸು ಮಾಡಲಾಗುತ್ತದೆ. ಸುದೀರ್ಘವಾದ ಶ್ವಾಸ ಮತ್ತು ನಿಶ್ವಾಸ ಕೂಡ ಇದರಲ್ಲಿ ಸೇರಿದೆ. ಅದೇ ರೀತಿ ಸಮಾಧಿ ಸ್ಥಿತಿಯಲ್ಲಿ ದೀರ್ಘಕಾಲ ಉಸಿರನ್ನು ಹಿಡಿದುಕೊಳ್ಳುವುದನ್ನು ಶ್ವಾಸೋಚ್ಛ್ವಾಸ ಕ್ರಿಯೆಗಳಿಗೆ ಸಹಾಯಕವಾಗಿ ಸೂಚಿಸಲಾಗಿದೆ. ●

Regn. No. 040015/86
Regn. No. MH/By/NE121/95

## ಗರತಿ ಜಾನಪದದ ಮೂಲ ಸೆಲೆ

(ಪುಟ 13ರಿಂದ)

ಹಿರಿಸೊಸಿ ಮಲ್ಲವನ ಹಾರವ ಕೊಡಬೇಕು
ಹಾರವ ಕೊಟ್ಟರ ನೀರು ಬೀಳೂ ಎಂದ್ರೂ".

ಇದರ ಇಡೀ ಕತೆಯ ದುರಂತವೇ ಒಂದು `ಮೂಢ' ನಂಬಿಕೆಯ ಮೇಲೆ ನಿಂತಿದೆ. ಹೊಸದಾಗಿ ಕಟ್ಟಿಸಿದ ಕೆರೆಗೆ ನೀರು ಬಾರದಿದ್ದರೆ ಜ್ಯೋತಿಷ್ಯ ಕೇಳುವುದೂ, ಅದಕ್ಕೆ ಪರಿಹಾರವಾಗಿ ಮನೆಯ ಸೊಸೆಯನ್ನು ಹಾರವಾಗಿ ಕೊಡಬೇಕೆನ್ನುವುದೂ ಈಗ ನಮಗೆ ಅರ್ಥವಿಲ್ಲದ್ದಾಗಿ ಕಾಣುವ ಅಮಾನುಷ ಸಂಪ್ರದಾಯ. ಭಾಗೀರಥ ತನ್ನೆಲ್ಲಾ ಸಂಕಟವನ್ನು ನುಂಗಿಕೊಂಡು ಹಾಳವಾದದ್ದೂ, ಸಂಯಮದ ಶಿಖರವೇ ಸರಿ. ಆದರೂ ಕೊನೆಯಲ್ಲಿ ಭಾಗೀರಥಿಯೂ ದೇವರಾಯರ ವೈಯ್ಯಕ್ತಿಕ ದುಃಖದ ತೀವ್ರತೆಗಿಂತ ಕೆರೆಗೆ ನೀರು ಬಂದ ಸಾಮಾಜಿಕ ಪರಿಣಾಮವೇ ಅಲ್ಲಿ ಮುಖ್ಯವಾಗುತ್ತದೆ.

ಒಟ್ಟಿನಲ್ಲಿ ಇದೊಂದು ಜೀವನವೇ ಕಾವ್ಯವಾದ ಜನಪದ ಸಾಹಿತ್ಯದ ಇಣುಕು ನೋಟ. ವಿಶೇಷವಾಗಿ ಕಥಾ ವಸ್ತುವಿಲ್ಲದಿದ್ದರೂ, ನಾಯಕ-ನಾಯಿಕೆಯರಿಲ್ಲದಿದ್ದರೂ ಇದೊಂದು ದರ್ಶನೀಯ ಸಾಹಿತ್ಯವಾಗಿದೆ. ನಮ್ಮ ನಾಡಿನ ಬಡತನದ ಬಾಳಿನ ಗೋಳಿನಲ್ಲಿಯೂ ನಮ್ಮ ತಾಯಂದಿರು, ಅಕ್ಕ-ತಂಗಿಯರು ತಮ್ಮ ಹೃದಯದಲ್ಲಿ ತುಂಬಿಕೊಂಡಿರುವ ಸೌಜನ್ಯ, ಸರಳತೆ, ಬಂಧು ಪ್ರೇಮ, ನೀತಿ, ಸಮಾಧಾನ ಮುಂತಾದ ಜೀವನ ಮೌಲ್ಯಗಳನ್ನು ಕಂಡಾಗ, ನಮಗೆ ನಿಜವಾಗಿಯೂ ಹೆಮ್ಮೆಯೆನಿಸುವುದು.

ಎಲ್ಲೆಡೆಗೂ ಶಾಂತತೆಯ ಸಾಮ್ರಾಜ್ಯ ನೆಲೆಸಿದ, ಬೆಳಗಿನ ಸಕ್ಕರೆ ನಿದ್ದೆಯ ಸಮಯದಲ್ಲಿ ನಾಗರ ಹೆಡೆಯಂತೆ ತಲೆದೂಗುತ್ತ, ತಮ್ಮ ಬಳೆಗಳ ನಾದದ ತಾಳ ಹಾಕುತ್ತ ಬೀಸುವಾಗ ಗರತಿಯರು ಹಾಡುವ ಹಾಡುಗಳು ಸೊಗಸಿನಿಂದ ತಣಿಯದವರಾರು?

ಜನಪದ ಸಾಹಿತ್ಯದಲ್ಲಿ ನಮ್ಮ ಸಂಸ್ಕೃತಿಯೇ ಅಡಕವಾಗಿರುವುದರಿಂದ ಇದರ ಸಂಸ್ಕಾರವು ನಮ್ಮ ಜನತೆಗೆ ಅತ್ಯಾವಶ್ಯಕವಿದೆ.

ಇದನ್ನು ರಕ್ಷಿಸಿ ನಮ್ಮದೇ ಆದ ಭಾಂಡಾರವನ್ನು ಇತರರಿಗೆ ತೋರಿಸಿ ನಾವೆಲ್ಲ ಅಭಿಮಾನ ಪಡುವಂತಾಗಬೇಕು.

●

## ನೇಪಿಯೆನ್ಸೀ ರೋಡಿನಲ್ಲಿ. . .

ಅವಳು
ಬೆನ್ನ ತೊಟ್ಟಿಲಲಿ
ಹಾಲು ಶಿಶುವನು ತೂಗಿ
ಕಲ್ಲು ಒಡೆಯುತ್ತಾದ್ದಾಳೆ
(ಗಗನ) ಚುಂಬಿಗಳ ಮಧ್ಯೆ
ನೇಪಿಯನ್ಸೀ ರೋಡಿನಲ್ಲಿ!
ಕಲ್ಲು ಸಿಡಿಯುತ್ತಿತ್ತು
ಮಗು ಅಳುತ್ತಿತ್ತು
ಹರಿದ ಅವಳ ರವಕೆಯೆಡೆಯಿಂದ
ತುಂಬಿದ ಮೊಲೆ ಇಣುಕುತ್ತಿತ್ತು;
ಹಾಲು ಜಿನುಗುತ್ತಿತ್ತು!
ನಾನು ಇವೆಲ್ಲವನ್ನೂ
ನೋಡಲಾರದೆ ನೋಡಿದೆ.

❀❀❀

## ಅನಿವಾರ್ಯತೆ

ನನ್ನ ಅಪ್ಪ ಅಮ್ಮನ ನಿದ್ರಾಹೀನತೆಯ
ತೀಟೆಯ ಫಲವೋ
ಹುಟ್ಟಿದ್ದಕ್ಕಾಗಿ ಹುಟ್ಟಿಸಲೇ
ಬೇಕೆಂಬ ಅವರ ಛಲವೋ
ಅಂತೂ ಹುಟ್ಟಿದ್ದೇನೆ!
ಹುಟ್ಟಿದ್ದಕ್ಕಾಗಿ ಬದುಕುತ್ತೇನೆ
ಬದುಕುತ್ತಲೇ ಸಾಯುತ್ತೇನೆ
ಸತ್ತರೂ ಬದುಕುತ್ತೇನೆ
ಬದುಕಿ ಸತ್ತು
ಸತ್ತು ಬದುಕಿ
ಮತ್ತೆ ಮತ್ತೆ
ಸಾಯುತ್ತಲೇ ಇರುತ್ತೇನೆ.

❀❀❀

## (ಜೀವನ) ಸಾಹಿತ್ಯ ಚರಿತ್ರೆ

ಆರಂಭದ ಬದುಕು ನವೋದಯ
ಹದಿಹರೆಯ ಪ್ರಗತಿಶೀಲ ಯುಗ
ಯೌವ್ವನ ನವ್ಯ
ಮೂವತ್ತೈದು ನಲವತ್ತು ಬಂಡಾಯ
ನಲವತ್ತರ ಬಳಿಕ ನವ್ಯೋತ್ತರ.

- ಸೀತಾರಾಮ್ ಆರ್. ಶೆಟ್ಟಿ

## Matrimonial

Groom Wanted (preferably MCA PG Eng for a physics PG computer diploma holding, 27 years fair looking Kannada Madwa girl, height 5'1" koundinyasa gothra Bride wanted for achemistry Phd, working in Mumbai 34 years fair good looking Kannada Madhwa boy, height 5'6" Koundinyasa gothra and for both you may write to box No 123

* * *

Kannada Madhwa Brahmin boy 28 years 6'2" fair Msc. BED M.Phil employed Maudgally, Vishaka , Tula own house Bandra invited Madhava community only Graduate employed girl below 24 years 5'4" good looking smarta excuse contact 6047045

* * *

Matrimonial alliance invited for a Kannada speaking Hoysala Brahmin girl, age 22 years, 5'-2". Kashyap Gotra. Commerce graduate with Diploma in Early Childhood Care & Education from Bombay University. Working in J. K. School, Thane (Raymonds). Boy schould not be NRI, Doctor, Singlechild. Should be religious minded with hygienic habits. Working in Bombay preferably in Thane area. May write to Box No. 121.

## FLAT FOR SALE

| | |
|---|---|
| Location | Antop Hill |
| Area | 600 sq. ft. |
| Price | 25 Lacs (Negotiable) |

Contact 4127871
Mr. Srikantha

Edited, Printed & Published by M.A.N. Prasad on behalf of the Mysore Association, Mumbai- Tel.: 402 46 47
Laser Typset and Printed at Aarati Art Printers, Fort, Mumbai-400 001. * Tel.: 266 33 61/266 59 38